ಅನುದಾನದ ಮೊತ್ತ

23 (30) ಶ್ರೀ ಮಂಜು ಎ. (ಅರಕಲಗೂಡು) ಶ್ರೀ ಆರ್. ನರೇಂದ್ರ (ಹನೂರು) ವಿಧಾನ ಸಭಾ ಸದಸ್ಯರು : ಮಾನ್ಯ ಕಾರ್ಮಿಕ ಮತ್ತು ರೇಷ್ಮೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 2009–10, 2010–11 ಮತ್ತು 2011–12ನೇ ಸಾಲಿಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರವು ಆಯವ್ಯಯದಲ್ಲಿ ಇಲಾಖೆಗೆ ಘೋಷಿಸಲಾದ ಅನುದಾನ ಮೊತ್ತವೆಷ್ಟು; ಬಿಡುಗಡೆಯಾದ ಮೊತ್ತವೆಷ್ಟು; ಎಷ್ಟು ವೆಚ್ಚ ಮಾಡಲಾಗಿದೆ.

ಆ) ಈ ಸಾಲುಗಳಲ್ಲಿ ಆಯವ್ಯಯದಲ್ಲಿ ಇಲಾಖೆಯ ಮುಖಾಂತರ ಜಾರಿಗೊಳಿಸಲು ಪ್ರಕಟಿಸಿದ ಹೊಸ ಯೋಜನೆಗಳಾವುವು (ಯೋಜನೆಗಳ ಸರ್ಕಾರಿ ಆದೇಶದ ಪ್ರತಿಗಳನ್ನು ಒದಗಿಸುವುದು.);

ಇ) ಹಾಗಿದ್ದಲ್ಲಿ, ಈ ಯೋಜನೆಗಳಿಗೆ ಘೋಷಿಸಲಾದ ಅನುದಾನವೆಷ್ಟು; ಎಷ್ಟು ಮೊತ್ತ ಬಿಡುಗಡೆ ಮಾಡಲಾಗಿದೆ; ಎಷ್ಟು ವೆಚ್ಚ ಮಾಡಲಾಗಿದೆ; ಯೋಜನೆಗಳ ಪ್ರಸಕ್ತ ಸ್ಥಿತಿ ಏನು (ವರ್ಷವಾರು ಮಾಹಿತಿ ಒದಗಿಸುವುದು.);

ಈ) ಕೇಂದ್ರ ಸರ್ಕಾರದಿಂದ ಇಲಾಖೆಗೆ ಕಳೆದ ಮೂರು ಸಾಲಿನಲ್ಲಿ ಎಷ್ಟು ಸಹಾಯಧನ/ಅನುದಾನ/ಸಾಲ/One Time Grant ಬಂದಿರುತ್ತದೆ. ರಾಜ್ಯ ಸರ್ಕಾರವು ನೀಡಬೇಕಿದ್ದ ಮ್ಯಾಚಿಂಗ್ ಗ್ರ್ಯಾಂಟ್ಸ್ ಎಷ್ಟು ನೀಡಬೇಕಾಗಿತ್ತು; ಎಷ್ಟು ನೀಡಲಾಗಿದೆ; ಲ್ಯಾಪ್ಸ್ ಮಾಡಿದ ಗ್ರ್ಯಾಂಟ್ಸ್‌ಗಳೆಷ್ಟು (ವಿವರ ಒದಗಿಸುವುದು);

ಉ) ಕೇಂದ್ರ ಸರ್ಕಾರದ ಬಳಿ ಇಲಾಖೆಯ ಯಾವ ಯಾವ ಪ್ರಸ್ತಾವನೆಗಳು ಬಾಕಿ ಇರುತ್ತವೆ; ಕಳೆದ ಮೂರು ವರ್ಷಗಳಲ್ಲಿ ರಾಜ್ಯ ಸರ್ಕಾರದಿಂದ ಹೊಸದಾಗಿ ಎಷ್ಟು ಪ್ರಸ್ತಾವನೆಗಳನ್ನು ಸಲ್ಲಿಸಲಾಗಿದೆ (ಪೂರ್ಣ ಮಾಹಿತಿ ಒದಗಿಸುವುದು);

ಊ) ಕಳೆದ ಮೂರು ವರ್ಷಗಳಲ್ಲಿ ಎಷ್ಟು ಅಧಿಕಾರೇತರ ಸಮಿತಿ/ಆಯೋಗಗಳನ್ನು ರಚಿಸಲಾಗಿದೆ; ಈ ಸಮಿತಿಗಳ ಆಡಳಿತ ನಿರ್ವಹಣೆಗಾಗಿ ಎಷ್ಟು ವೆಚ್ಚವಾಗಿದೆ?

ಶ್ರೀ ಬಿ.ಎನ್. ಬಚ್ಚೇಗೌಡ (ಕಾರ್ಮಿಕ ಮತ್ತು ರೇಷ್ಮೆ ಸಚಿವರು) :

ಅ) ಮಾಹಿತಿಯು ಕೆಳಗಿನಂತಿದೆ.

(ಲಕ್ಷ ರೂ.ಗಳು) **(Rs. in Lacks)**

ಕಾರ್ಮಿಕ ಇಲಾಖೆ. (Labour Department)								
2009–10			**2010–11**			**2011–12**		
ನಿಗದಿಪಡಿಸಿದ ಅನುದಾನ **(Allocation)**	ಬಿಡುಗಡೆಯಾದ ಅನುದಾನ **(Released)**	ವೆಚ್ಚ **(Expen)**	ನಿಗದಿಪಡಿಸಿದ ಅನುದಾನ **(Allocation)**	ಬಿಡುಗಡೆಯಾದ ಅನುದಾನ **(Released)**	ವೆಚ್ಚ **(Expen)**	ನಿಗದಿಪಡಿಸಿದ ಅನುದಾನ **(Allocation)**	ಬಿಡುಗಡೆಯಾದ ಅನುದಾನ **(Released)**	ವೆಚ್ಚ **(Expen)**
3561.31	2908.31	2910.32	5920.42	3240.42	3227.23	5498.24	2178.12	2178.12
ಉದ್ಯೋಗ ಮತ್ತು ತರಬೇತಿ ಇಲಾಖೆ (Employment and Training Department)								
26801.93	26801.93	26459.36	27450.00	19176.50	174585.543	30192.00	18872.03	13167.82
ಕಾರಾವಿ ವೈದ್ಯಕೀಯ ಸೇವೆಗಳು (ESI)								
1941.62	1941.62	1762.70	1745.00	1745.00	1665.25	5000	5000	1632.55
ಕಾರ್ಖಾನೆಗಳು, ಬಾಯ್ಲರುಗಳು, ಕೈಗಾರಿಕಾ ಸುರಕ್ಷತೆ ಮತ್ತು ಸ್ವಾಸ್ಥ್ಯ ಇಲಾಖೆ (F & B)								
83.03	83.03	79.63	80.00+17.00	97.00	92.63	80.00+20.00	100.00	80.76

ಆ) ಈ ಸಾಲುಗಳಲ್ಲಿ ಈ ಕೆಳಗಿನ ಹೊಸ ಯೋಜನೆಗಳನ್ನು ಜಾರಿಗೊಳಿಸಲಾಗಿದೆ.

1. ರಾಷ್ಟ್ರೀಯ ಸ್ವಾಸ್ಥ್ಯ ಬೀಮಾ ಯೋಜನೆ
2. ಅಸಂಘಟಿತ ಕಾರ್ಮಿಕರ ಪಿಂಚಣಿ ಯೋಜನೆ
3. ಚಾಲಕರಿಗೆ ವಿಮಾ ಯೋಜನೆ.
4. ವಿದ್ಯಾರ್ಥಿ ಆಧಾರಿತ ಸಹಾಯಾನುದಾನ

5. ನೂತನ ಕೈಗಾರಿಕಾ ತರಬೇತಿ ಸಂಸ್ಥೆ ಸ್ಥಾಪನೆಗೆ ತಗಲುವ ಬಂಡವಾಳದ ವೆಚ್ಚದ ಶೇ.25% ರಷ್ಟು ರೂ.25 ಲಕ್ಷ ಮಿತಿಯಲ್ಲಿ ಸಹಾಯಾನುದಾನ ಒದಗಿಸುವುದು.
6. ಮೆಡಿಕಲ್ ಎಲೆಕ್ಟ್ರಾನಿಕ್ಸ್ ವೃತ್ತಿಯನ್ನು ಕೈಗಾರಿಕಾ ತರಬೇತಿ ಸಂಸ್ಥೆಗಳಲ್ಲಿ ಪ್ರಾರಂಭಿಸುವುದು.
7. ಆಟೋ ಮೆಕ್ಯಾನಿಕ್ ವೃತ್ತಿಯನ್ನು ಕೈಗಾರಿಕಾ ತರಬೇತಿ ಸಂಸ್ಥೆಗಳಲ್ಲಿ ಪ್ರಾರಂಭಿಸುವುದು.
8. ಗುಲ್ಬರ್ಗಾ ಮತ್ತು ಬೆಂಗಳೂರು ನಗರಗಳಲ್ಲಿ ರೂ.65 ಕೋಟಿ ವೆಚ್ಚದಲ್ಲಿ ಎರಡು ಮಲ್ಟಿಸ್ಕಿಲ್ ಡೆವಲಪ್ ಮೆಂಟ್ ಸೆಂಟರ್‌ಗಳನ್ನು ಪ್ರಾರಂಭಿಸುವುದು.

(ಆದೇಶದ ಪ್ರತಿಗಳನ್ನು ಲಗತ್ತಿಸಿದೆ.)

ಇ) ಅನುಬಂಧ–1 ರಲ್ಲಿ ಲಗತ್ತಿಸಿದೆ.

ಈ) **ಉದ್ಯೋಗ ಮತ್ತು ತರಬೇತಿ ಇಲಾಖೆ.**

(ರೂ. ಲಕ್ಷಗಳಲ್ಲಿ)

2009–10			2010–11			2011–12		
ಕೇಂದ್ರ ಸರ್ಕಾರದಿಂದ ಬಂದಿರುವ ಅನುದಾನ (Central Grant)	ರಾಜ್ಯ ಸರ್ಕಾರದ ಮ್ಯಾಚಿಂಗ್ ಗ್ರ್ಯಾಂಟ್ಸ್ (State Grant)	ಲ್ಯಾಪ್ಸ್ ಆದ ಹಣ (Amount Lapsed)	ಕೇಂದ್ರ ಸರ್ಕಾರದಿಂದ ಬಂದಿರುವ ಅನುದಾನ (Central Grant)	ರಾಜ್ಯ ಸರ್ಕಾರದ ಮ್ಯಾಚಿಂಗ್ ಗ್ರ್ಯಾಂಟ್ಸ್ (State Grant)	ಲ್ಯಾಪ್ಸ್ ಆದ ಹಣ (Amount Lapsed)	ಕೇಂದ್ರ ಸರ್ಕಾರದಿಂದ ಬಂದಿರುವ ಅನುದಾನ (Central Grant)	ರಾಜ್ಯ ಸರ್ಕಾರದ ಮ್ಯಾಚಿಂಗ್ ಗ್ರ್ಯಾಂಟ್ಸ್ (State Grant)	ಲ್ಯಾಪ್ಸ್ ಆದ ಹಣ (Amount Lapsed)
30 ಕೋಟಿ ಒಂದು ಸಲದ	–	–	1985.115 ಮಾಡ್ಯುಲಾರ್	–	–	–	–	–

ಅನುದಾನ One time grant			ಎಂಪ್ಲಾಯಬಲ್ ಸ್ಕಿಲ್‌ಗಾಗಿ MES					
1507.50 ವೋಕೇಷನಲ್ ಟ್ರೈನಿಂಗ್ ಇಂಪ್ರೂಮೆಂಟ್ ಪ್ರಾಜೆಕ್ಟ್ ಗಾಗಿ (VTIP)	502.50	–	1882.50	627.50	–	1895.40	631.80	–
5750.00 30 ಕೈಗಾರಿಕಾ ತರಬೇತಿ ಸಂಸ್ಥೆಗಳ ಉನ್ನತೀಕರಣಕ್ಕಾಗಿ 30 Center of Excellence	–	–	250	–	–	–	–	–

ಉ) ಯಾವುದೂ ಇಲ್ಲ.

ಊ) ಯಾವುದೂ ಇಲ್ಲ.

<u>ಅನುಬಂಧ–1</u>

ರೂ. ಲಕ್ಷಗಳಲ್ಲಿ.

ಕ್ರ.ಸಂ	ಹಣಕಾಸು ವರ್ಷ	ಹೊಸ ಯೋಜನೆಗಳು	ಸರ್ಕಾರದ ಆದೇಶದ ಸಂಖ್ಯೆ ಮತ್ತು ದಿನಾಂಕ	ಆಯವ್ಯಯದಲ್ಲಿ ಘೋಷಿಸಲಾದ ಅನುದಾನ	ಬಿಡುಗಡೆಯಾದ ಅನುದಾನ	ಖರ್ಚಾದ ಅನುದಾನ	ಷರಾ
1	2	3	4	5	6	7	8
				ಕಾರ್ಮಿಕ ಇಲಾಖೆ			
1	2009–10	ರಾಷ್ಟ್ರೀಯ ಸ್ವಾಸ್ಥ್ಯ ಬಿಮಾ ಯೋಜನೆ	–	1204.00	551.00	551.00	–
2	2010–11	ರಾಷ್ಟ್ರೀಯ ಸ್ವಾಸ್ಥ್ಯ ಬಿಮಾ ಯೋಜನೆ	–	1500.00	750.00	750.00	–
3		ಅಸಂಘಟಿತ ಕಾರ್ಮಿಕರ ನೂತನ ಪಿಂಚಣಿ ವ್ಯವಸ್ಥೆಗಾಗಿ ವಂತಿಕೆ	–	2000.00	70.00	70.00	ಉಳಿಕೆ ರೂ. 1930.00 ಹಣವನ್ನು ಅಧ್ಯರ್ಪಿಸಲಾಗಿದೆ.
4	2011–12	ರಾಷ್ಟ್ರೀಯ ಸ್ವಾಸ್ಥ್ಯ ಬಿಮಾ ಯೋಜನೆ	–	1200.00	1100.00	1100.00	ಮೇ 2013ರ ಅಂತ್ಯದೊಳಗೆ ಖರ್ಚು ಮಾಡಲಾಗುತ್ತದೆ.
5		ಅಸಂಘಟಿತ ಕಾರ್ಮಿಕರ ನೂತನ ಪಿಂಚಣಿ ವ್ಯವಸ್ಥೆಗಾಗಿ ವಂತಿಕೆ	–	1210.00	15.792	15.792	–
6		ಚಾಲಕರಿಗೆ ವಿಮಾ ಯೋಜನೆ.	–	200.00	200.00	200.00	ಹಣ ಡ್ರಾ ಮಾಡಿ ಅಸಂಘಟಿತ ಕಾರ್ಮಿಕರ ಕಲ್ಯಾಣ ಮಂಡಳಿಗೆ ಜಮಾ ಮಾಡಲಾಗಿದೆ. ಮುಂದಿನ ಸಾಲಿನಲ್ಲಿ ಖರ್ಚು ಮಾಡಲಾಗುವುದು.

ಉದ್ಯೋಗ ಮತ್ತು ತರಬೇತಿ ಇಲಾಖೆ							
1	2	3	4	5	6	7	8
7	2010-11	ವಿದ್ಯಾರ್ಥಿ ಆಧಾರಿತ ಸಹಾಯನುದಾನ	ಸರ್ಕಾರಿ ಆದೇಶ ಸಂ: ಕಾಇ 118 ಇಟಿಐ 2010, ಬೆಂಗಳೂರು ದಿ: 30-08-2010	5000.00	0.00	0.00	ಯಾವುದೇ ಅರ್ಜಿ ಸ್ವೀಕರಿಸದ ಕಾರಣ ಅನುದಾನವನ್ನು ವೆಚ್ಚ ಮಾಡಿರುವುದಿಲ್ಲ
8.		ನೂತನ ಕೈಗಾರಿಕಾ ತರಬೇತಿ ಸಂಸ್ಥೆ ಸ್ಥಾಪನೆಗೆ ತಗಲುವ ಬಂಡವಾಳದ ವೆಚ್ಚದ ಶೇ 25%ರಷ್ಟು ರೂ. 25 ಲಕ್ಷ ಮಿತಿಯಲ್ಲಿ ಸಹಾಯಾನುದಾನ ಒದಗಿಸುವುದು.	ಸರ್ಕಾರಿ ಆದೇಶ ಸಂ: ಕಾಇ 119 ಇಟಿಐ 2010, ಬೆಂಗಳೂರು, ದಿ: 01-06-2010	5000.00	3000.00	0.00	ಯಾವುದೇ ಅರ್ಜಿ ಸ್ವೀಕರಿಸದ ಕಾರಣ ಕಾರ್ಯಕ್ರಮ ಅನುಷ್ಠಾನ ಗೊಂಡಿರುವುದಿಲ್ಲ.
9	2011-12	ವಿದ್ಯಾರ್ಥಿ ಆಧಾರಿತ ಸಹಾಯನುದಾನ	-	2500.00	0.00	0.00	ಯಾವುದೇ ಅರ್ಜಿ ಸ್ವೀಕರಿಸದ ಕಾರಣ ಅನುದಾನವನ್ನು ವೆಚ್ಚ ಮಾಡಿರುವುದಿಲ್ಲ. ಪ್ರಸಕ್ತ ಸಾಲಿನಲ್ಲಿ 29 ಅರ್ಜಿಗಳನ್ನು ಸ್ವೀಕರಿಸಿದ್ದು, 7 ಅರ್ಹ ಅರ್ಜಿಗಳು ಸರ್ಕಾರದ ಪರಿಶೀಲನೆಯಲ್ಲಿದೆ..
10		ನೂತನ ಕೈಗಾರಿಕಾ ತರಬೇತಿ ಸಂಸ್ಥೆ ಸ್ಥಾಪನೆಗೆ ತಗಲುವ ಬಂಡವಾಳದ ವೆಚ್ಚದ ಶೇ 25%ರಷ್ಟು ರೂ. 25 ಲಕ್ಷ ಮಿತಿಯಲ್ಲಿ ಸಹಾಯಾನುದಾನ ಒದಗಿಸುವುದು.	-	2100.00	0.00	0.00	ಯಾವುದೇ ಅರ್ಜಿ ಸ್ವೀಕೃತವಾಗಿರುವುದಿಲ್ಲ.
11		ಮೆಡಿಕಲ್ ಎಲೆಕ್ಟ್ರಾನಿಕ್ಸ್ ವೃತ್ತಿಯನ್ನು ಕೈಗಾರಿಕಾ ತರಬೇತಿ ಸಂಸ್ಥೆಗಳಲ್ಲಿ ಪ್ರಾರಂಭಿಸುವುದು	ಸರ್ಕಾರಿ ಆದೇಶ ಸಂ: ಕಾಇ 107 ಇಟಿಐ 2011, ಬೆಂಗಳೂರು ದಿ: 13-01-2012	0.00	0.00	0.00	ಅನುದಾನ ಒದಗಿಸಿಲ್ಲ ಯೋಜನೆಯನ್ನು 2012-13ರ ಶೈಕ್ಷಣಿಕ ವರ್ಷದಿಂದ ಕಾರ್ಯಗತಗೊಳಿಸಲಾಗುವುದು.

1		3	4	5	6	7	8
12		ಆಟೋ ಮೆಕ್ಯಾನಿಕ್ ವೃತ್ತಿಗಳನ್ನು ಕೈಗಾರಿಕಾ ತರಬೇತಿ ಸಂಸ್ಥೆಗಳಲ್ಲಿ ಪ್ರಾರಂಭಿಸುವುದು.	ಸರ್ಕಾರಿ ಆದೇಶ ಸಂ: ಕಾಇ 98 ಇಟಿಐ 2011, ಬೆಂಗಳೂರು ದಿ: 16-12-2011	0.00	0.00	0.00	ಅನುದಾನ ಒದಗಿಸಿಲ್ಲ ಯೋಜನೆಯನ್ನು 2012-13ರ ಶೈಕ್ಷಣಿಕ ವರ್ಷದಿಂದ ಕಾರ್ಯಗತಗೊಳಿಸಲಾಗುವುದು.
13		ಎರಡು ಮಲ್ಟಿಸ್ಕಿಲ್ ಡೆವಲಪ್‌ಮೆಂಟ್ ಸೆಂಟರ್‌ಗಳನ್ನು ಪ್ರಾರಂಭಿಸುವುದು	ಸರ್ಕಾರಿ ಆದೇಶ ಸಂ: ಕಾಇ 193 ಇಟಿಐ 2010, ಬೆಂಗಳೂರು ದಿ: 25-10-2010	65000.00	20,000.00	723.15629	ಬೆಂಗಳೂರು ಹಾಗೂ ಗುಲ್ಬರ್ಗಾ ಕೇಂದ್ರಗಳಲ್ಲಿ ಈಗಾಗಲೇ ತರಬೇತಿ ಕಾರ್ಯಕ್ರಮಗಳನ್ನು ಪ್ರಾರಂಭಿಸಲಾಗಿದೆ.

PROCEEDINGS OF THE GOVERNMENT OF KARNATAKA

Sub: Launching of Rashtriya Swasthya Bima Yojane in Karnataka for providing Health cover to BPL workers in the Un-organized Sector.

Read: 1. Rashtriya Swasthya Bima Yojane guidelines to Health Insurance scheme for the Unorganized Sector workers issued by the Ministry of Labour and Employment, Government of India.

2. Letter No.M-21021/06/2007- RW (HIS) dated: 25.10.2007 of the Director General. Labour, Welfare, Ministry of Labour and Employment, New Delhi.

3. Correspondence resting with letter No. LGN/ RSBY/CRT-14/2007-08 dated: 15.2.2008 of the Labour Commissioner.

PREAMBLE :

The Government of India while implementing certain Social security measure for occupational groups noticed that majority of the workers is still without social security. To provide some health needs to those workers the Parliament passed a Bill to introduce a scheme called ***"Rashtriya Swasthya Bima Yojane".*** The main aim of the project is to provide health insurance coverage to the workers, spouse and three dependent children of their families who are below poverty line (BPL) in the un-organized sector. The said scheme will be implemented in a phased manner of five years starting from 2008-09 to 2012-13. The worker and his family members will be insured at a sum of Rs.30,000/-the premium of which will be paid by the Central Government to a maximum of 75% of the estimated annual premium (Rs. 750) subject to a

maximum of Rs. 565, and the remaining 25% (ie, Rs. 185) will be borne by the State Government. The cost of Smart Card of Rs.60/- would be payable per beneficiary by the Government of India.

The scheme envisages coverage of beneficiaries in 29 districts of Karnataka, which is as follows:

During the year 2008-09	- Six districts
During the year 2009-10	- Six districts
During the year 2010-11	- Six districts
During the year 2011-12	- Six districts
During the year 2012-13	- Five districts.

During the year 2008-09, it is proposed to cover around 7,26,167 BPL families in the following six districts (based on 2007 survey census list of RD & PR and 1998-99 census list of Swarna Jayanthi Shahari Rozgar Yojane)

BPL beneficiaries from the balance 23 districts allocated to Government of Karnataka will be taken up as scheduled by the scheme during the next four years as decided by the State Level Co-ordination Committee and will cover around 30,11,884 BPL families at the end of five years.

The total cost of the project at the end of fifth year (for 29 districts) amounts to Rs.225.9 crores per annum. Out of which, the commitment of Government of Karnataka per annum would be Rs.55.71 crores and GOI is Rs. 170.17 crores (as per annexure).

During the current year i.e., 2008-09 it is proposed to cover around 7.26,167 BPL families in the six districts (based on 2007 survey census list of RD & PR and updated 1998-99 census list of Swarna Jayanthi Shahari Rozgar Yojane).

Sl. No.	Name of the District	No of BPL Families			Contribution of the GOI @ Rs. 565/- per beneficiary Per annum	Contribution of GOK @ Rs. 185/- per beneficiary Per annum	Total Contribute On per Annum	GOI Contribute On for smart card @ Rs.60/-
		Rural	Urban	Total				
1	Belgaum	156811	56716	213527	120642755	39502485	160145250	12811620
2	Gulbarga	194238	95628	289866	163774290	53625210	217399500	17391960
3	Shimoga	36498	54048	90546	51158490	16751010	67909500	5432760
4	Mysore	122511	52131	174642	98672730	32308770	130981500	10478520
5	Dakshina Kannada	41578	25466	67044	37879860	12403140	50283000	4022640
6	Bangalore Rural	66925	37144	104069	58798985	19252765	78051750	6244140
	Total Project Cost for 1 year	**461750**	**264417**	**726167**	**530927110**	**173843380**	**704770500**	**56381640**

As Per the guidelines of the Rashtriya Swasthya Bima Yojane, State level co-ordination committee meeting under the chairmanship of Principal Secretary, Labour Department was held on 17.12.2007. In that meeting, State level nodal agency under the chairmanship of Labour Commissioner and Inter Department Coordination committee has been constituted vide Notification No. LD/2/LWA/2008 Dated: 6.2.2008.

The Labour Commissioner and Chairman of the Nodal Agency has sent a proposal to Government and informed that the scheme contemplates a nodal agency having a separate legal entity under the control of the State Government to run the scheme. It is imperative that the nodal agency will have to be converted into a registered society. He has requested the Government to permit formation of the society in the name and style "The Karnataka State Rastriya Swasthya Bima Yojane Society" to be registered under the societies registration Act. The Nodal agency also requested to grant Rs. 10 lakhs per annum to meet the Administrative expenditure for the said society.

The main objectives of the said society are:-

a) Selection of Health insurance provider through tendering process inviting both Public and Private Insurers entering to contract with the Insurance provider signing of MOU as per the guidelines of GOI.
b) To co-ordinate with the State and Central Government.
c) Drawing up program for enrollment and ensure issuance of smart card by Insurance provider.
d) To formulate District Level Coordination Committee for monitoring and implementation.
e) Documentation of Project Reports and Monitoring, Evaluation, Review of the work of progress at District Level and cause mid course correction whenever needed.

f) Facilitate organizing of workshops at taluk, district and State Level to bring awareness among beneficiaries about the scheme.
g) Undertake all such measures as may be necessary for the effective implementation of the program.

Hence the following order

GOVERNMENT ORDER NO. LD 2 LWA 2008, BANGALORE, DATED: 29/3/2008.

Sanction is accorded to

(a) Implement Rashtriya Swasthya Bima Yojane
(b) Provide an amount of Rs. 17.38 Crores as State contribution for the first year ie., 2008-09 in the budget of 2008-09.
(c) Form The Karnataka State Rashtriya Swasthya Bima Yojane Society and entrust it with the responsibility to implement the program effectively.
(d) To provide an amount of Rs. 10 Lakhs (Rupees Ten lakhs only) per annum towards administrative expenditure.

This order is issued with the concurrence of Planning and Finance departments vide their Note No. PD 16 M&E 2008 dated: 24.3.2008 and ED 254 Exp.9 2008 dated: 27.3.2008

By order and in the name of
President of India,

U.N. NAGENDRA
Under Secretary to Government
Labour Department.

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಕರ್ನಾಟಕ ರಾಜ್ಯದಲ್ಲಿ ಅಸಂಘಟಿತ ಕಾರ್ಮಿಕರಿಗೆ ಹೊಸ ಪಿಂಚಣಿ ಯೋಜನೆಯನ್ನು ಜಾರಿಗೊಳಿಸುವ ಬಗ್ಗೆ.

ಓದಲಾಗಿದೆ: 1. ಕಾರ್ಮಿಕ ಆಯುಕ್ತರ ಪತ್ರ ಸಂಖ್ಯೆ:ಎಸಿಟಿ-1/ಸಿಆರ್-10/2010-11, ದಿನಾಂಕ:19-06-2010

2. ಕಾರ್ಮಿಕ ಆಯುಕ್ತರ ಪತ್ರ ಸಂಖ್ಯೆ:ಎಸಿಟಿ-1/ಸಿಆರ್-25/2010-11, ದಿನಾಂಕ:29-06-2010

3. ಕಾರ್ಮಿಕ ಆಯುಕ್ತರ ಪತ್ರ ಸಂಖ್ಯೆ: ಅಸಂಕಾ/ಸಂ.ಟಿ/ ಸಿಆರ್-34/2010-11, ದಿನಾಂಕ: 05.07.2010

ಪ್ರಸ್ತಾವನೆ:

ಅಸಂಘಟಿತ ವಲಯದ ಕಾರ್ಮಿಕರಿಗೆ ಸಾಮಾಜಿಕ ಭದ್ರತೆ ಮತ್ತು ಕಲ್ಯಾಣ ಯೋಜನೆಗಳನ್ನು ಒದಗಿಸಲು ಭಾರತ ಸರ್ಕಾರವು ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಅಧಿನಿಯಮ 2008ನ್ನು ಜಾರಿಗೆ ತಂದಿದೆ.

ಈ ಅಧಿನಿಯಮವನ್ನು ಜಾರಿಗೊಳಿಸುವ ನಿಟ್ಟಿನಲ್ಲಿ ಕರ್ನಾಟಕ ಸರ್ಕಾರವು ದಿನಾಂಕ: 05.10.2009 ರಂದು ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿಯನ್ನು ರಚಿಸಿರುತ್ತದೆ ಮತ್ತು ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತೆ (ಕರ್ನಾಟಕ) ನಿಯಮಗಳು, 2009 ಅನ್ನು ದಿನಾಂಕ:28.10.2009 ರಂದು ಜಾರಿಗೆ ತಂದಿರುತ್ತದೆ.

ದರ್ಜಿ, ದೋಬಿ, ಹಮಾಲರು, ಖಾಸಗಿ ಹೋಟೆಲ್ ಕಾರ್ಮಿಕರು, ಆಟೋ ಮತ್ತು ಟ್ಯಾಕ್ಸಿ ಚಾಲಕರು ಹಾಗೂ ಖಾಸಗಿ ಬಸ್, ಲಾರಿ ಚಾಲಕರು ಹಾಗೂ ನಿರ್ವಾಹಕರು, ಆಟೋಮೊಬೈಲ್ ಗ್ಯಾರೇಜ್ ಮತ್ತು ವರ್ಕ್‌ಶಾಪ್ ಗಳಲ್ಲಿ ಕೆಲಸ ಮಾಡುತ್ತಿರುವ ಅಸಂಘಟಿತ ಕಾರ್ಮಿಕರನ್ನು ಹೊಸ ಪಿಂಚಣಿ ಯೋಜನೆಗೆ ಒಳಪಡಿಸಲು ಸರ್ಕಾರವು ಉದ್ದೇಶಿಸಿದೆ. ಈ ಪಿಂಚಣಿ ಯೋಜನೆಯನ್ನು ಅನುಷ್ಠಾನಕ್ಕೆ ತರಲು ರಾಜ್ಯ ಸರ್ಕಾರವು ಉದ್ದೇಶಿಸಿದೆ. ಈ ಪಿಂಚಣಿ ಯೋಜನೆಯನ್ನು ಅನುಷ್ಠಾನಕ್ಕೆ ತರಲು ರಾಜ್ಯ ಸರ್ಕಾರವು 2010-11ನೇ ಸಾಲಿನಲ್ಲಿ ₹2,000 ಲಕ್ಷಗಳನ್ನು ಲೆಕ್ಕ ಶೀರ್ಷಿಕೆ ಸಂಖ್ಯೆ: 2230-01-800-0-04ರ ಅಡಿಯಲ್ಲಿ ಒದಗಿಸಿರುತ್ತದೆ.

ರಾಜ್ಯ ಸರ್ಕಾರವು ಪ್ರತಿ ಅಸಂಘಟಿತ ಕಾರ್ಮಿಕರಿಗೆ ವಾರ್ಷಿಕ ₹1,200.00 ವಂತಿಕೆಯನ್ನು ಹೊಸ ಪಿಂಚಣಿ ಯೋಜನೆ ಅಡಿ ನೀಡಲು ಉದ್ದೇಶಿಸಿರುತ್ತದೆ. ಈ ಉದ್ದೇಶಕ್ಕಾಗಿ ಕಾರ್ಮಿಕರು ಪ್ರತಿ ಮಾಹೆ ಕನಿಷ್ಠ ₹100.00 ವಂತಿಕೆಯನ್ನು ಪಾವತಿಸಬೇಕಾಗುತ್ತದೆ.

ಪ್ರಾರಂಭಿಕವಾಗಿ, ಮೇಲಿನ 6 ವಲಯಗಳ ಅಸಂಘಟಿತ ಕಾರ್ಮಿಕರನ್ನು ಎನ್‌ಪಿಎಸ್ ಲೈಟ್ ಯೋಜನೆಗೆ ಒಳಪಡಿಸಬಹುದಾಗಿದೆ. 2010–11ನೇ ಸಾಲಿನಲ್ಲಿ ಸುಮಾರು 1.66 ಲಕ್ಷ ರಾಷ್ಟ್ರೀಯ ಪಿಂಚಣಿ ಯೋಜನೆ ಖಾತೆಗಳನ್ನು ತೆರೆಯುವ ಉದ್ದೇಶ ಹೊಂದಲಾಗಿದೆ. ಈ ಯೋಜನೆಯ ಎಲ್ಲಾ ವ್ಯವಹಾರಗಳು ವಿದ್ಯುನ್ಮಾನ ಆಧಾರಿತವಾಗಲಿದ್ದು KSWAN ಮತ್ತು ಎನ್‌ಪಿಎಸ್ ವೆಬ್‌ಸೈಟ್ ಮೂಲಕ ಸಂಪರ್ಕ ಕಲ್ಪಿಸಲಾಗುವುದು.

ಈ ಯೋಜನೆಯನ್ನು ರಾಜ್ಯದಲ್ಲಿ ಜಿಟಿಜೆಡ್ ಪ್ರಾಜೆಕ್ಟ್ ಇರುವ ಎಲ್ಲಾ ಹತ್ತು ತಾಲ್ಲೂಕುಗಳಲ್ಲಿ ಪ್ರಾಯೋಗಿಕವಾಗಿ ಗ್ರಾಮ, ಪಂಚಾಯಿತಿ ಮತ್ತು ನಗರ ವಾರ್ಡ್ ಮಟ್ಟದಲ್ಲಿ ವರ್ಕರ್ಸ್ ಫೆಸಿಲಿಟೇಶನ್ ಕೇಂದ್ರಗಳ ಮೂಲಕ ಅನುಷ್ಠಾನ ಮಾಡಬಹುದಾಗಿದೆ. ಈ ತಾಲ್ಲೂಕುಗಳಲ್ಲಿ ಇರುವ ಅಸಂಘಟಿತ ಕಾರ್ಮಿಕರನ್ನು ನೋಂದಾಯಿಸುವ ಜವಾಬ್ದಾರಿಯನ್ನು ಎನ್‌ಜಿಓ/ ಎಸ್.ಹೆಚ್.ಜಿ ಗಳಿಗೆ ವಹಿಸಬಹುದಾಗಿದೆ. ಈ ಎನ್‌ಜಿಓ ಮತ್ತು ವರ್ಕರ್ಸ್ ಫೆಸಿಲಿಟೇಶನ್ ಕೇಂದ್ರಗಳು ಅಸಂಘಟಿತ ಕಾರ್ಮಿಕರಲ್ಲಿ ಎನ್‌ಪಿಎಸ್–ಲೈಟ್ ಯೋಜನೆಯ ಬಗ್ಗೆ ಜಾಗೃತಿ ಮೂಡಿಸುವುದಲ್ಲದೆ, ಯೋಜನೆಯಡಿ ಕಾರ್ಮಿಕರ ನೋಂದಣಿ ಮಾಡಿಸಲು ಸಹಕಾರ ಪಡೆಯಬಹುದಾಗಿದೆ. ಎನ್ ಪಿಎಸ್ ಲೈಟ್ ಯೋಜನೆಯಡಿ ಎಲ್ಲಾ ಜಿಲ್ಲೆಗಳಲ್ಲಿ ಕಾರ್ಮಿಕರನ್ನು ನೋಂದಣಿ ಮಾಡಲು ಫೆಸಿಲಿಟೇಟರ್ಸ್, ಪಿ.ಓ.ಪಿ. ಗಳು, ಎನ್‌ಜಿಓಗಳು, ಕಾರ್ಮಿಕ ಸಂಘಗಳು, ಇತರೆ ಕಾರ್ಮಿಕರ ಸಂಘಟನೆಗಳು ಹಾಗೂ ಜಿ.ಟಿ.ಜಡ್. ಸಂಘಟನೆಯ ಸಹಾಯ ಪಡೆಯಬಹುದಾಗಿದೆ.

ಅಗ್ರಿಗೇಟರ್ (ಸಮನ್ವಯಕಾರರು) ಅಥವಾ / ಫೆಸಿಲಿಟೇಟರ್ ಏಜೆನ್ಸಿ ಇವರುಗಳು ರಾಜ್ಯ ಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿ ಮತ್ತು (P.F.R.D.A) ಪಿ.ಎಫ್.ಆರ್.ಡಿ.ಎ. ಇವರೊಂದಿಗೆ ಚರ್ಚಿಸಿ ವಾರ್ಷಿಕ/ಅರ್ಧ ವಾರ್ಷಿಕ ಕೊಡುಗೆ ಪಡೆಯಲು ಸಂಪರ್ಕ ಕೊಂಡಿಯಾಗಿ ಸಹಕರಿಸುತ್ತವೆ.

ಮೇಲೆ ವಿವರಿಸಿದ ಹಿನ್ನಲೆಯಲ್ಲಿ 2010–11ನೇ ಸಾಲಿನ ಲೆಕ್ಕಶೀರ್ಷಿಕೆ 2230–01–800–0–04 ಅಡಿಯಲ್ಲಿ ಒದಗಿಸಿರುವ ₹2000.00 ಲಕ್ಷ ಹಣವನ್ನು ಬಳಸಿಕೊಂಡು 1,66,666 ಮಂದಿ ಅಸಂಘಟಿತ ಕಾರ್ಮಿಕರನ್ನು ಹೊಸ ಪಿಂಚಣಿ ಯೋಜನೆಯ ವ್ಯಾಪ್ತಿಗೆ ಒಳಪಡಿಸಲು ಮತ್ತು ಮೇಲೆ ವಿವರಿಸಿದಂತೆ ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿಯ ಮೂಲಕ ಅಗ್ರಿಗೇಟರ್ (ಸಮನ್ವಯಕಾರರು) ಸಹಯೋಗ/ಪಾಲುದಾರಿಕೆಯಲ್ಲಿ ಈ ಯೋಜನೆಯನ್ನು ಅನುಷ್ಠಾನಗೊಳಿಸಲು ಸರ್ಕಾರವು ತೀರ್ಮಾನಿಸಿ ಈ ಕೆಳಗಿನಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ:ಕಾಇ 115 ಎಲ್‌ಇಟಿ 2010,
ಬೆಂಗಳೂರು, ದಿನಾಂಕ: 02.11.2010.

2010–11ನೇ ಸಾಲಿನ ಲೆಕ್ಕಶೀರ್ಷಿಕೆ 2230–01–800–0–04ರ ಅಡಿಯಲ್ಲಿ, ಚಂದಾದಾರರಾದ ಪ್ರತಿ ಅಸಂಘಟಿತ ಕಾರ್ಮಿಕನಿಗೆ ಸರ್ಕಾರವು ವಾರ್ಷಿಕ ₹1200/–ರಂತೆ ಒದಗಿಸಿರುವ ₹2000.00 ಲಕ್ಷ ಹಣವನ್ನು ಬಳಸಿಕೊಂಡು 6 ವಲಯಗಳ 1,66,666 ಮಂದಿ ಅಸಂಘಟಿತ ಕಾರ್ಮಿಕರನ್ನು ಹೊಸ ಪಿಂಚಣಿ ಯೋಜನೆಯ ವ್ಯಾಪ್ತಿಗೆ ಒಳಪಡಿಸಲು ಮತ್ತು ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿಯ ಮೂಲಕ ಗುರುತಿಸಲಾದ ಅಗ್ರಿಗೇಟರ್ (ಸಮನ್ವಯಕಾರರ) ಸಹಯೋಗ/ಪಾಲುದಾರಿಕೆಯಲ್ಲಿ ಈ ಯೋಜನೆಯನ್ನು ಅನುಷ್ಠಾನಗೊಳಿಸಲು ಅನುಮೋದನೆಯನ್ನು ನೀಡಲಾಗಿದೆ.

ಈ ಆದೇಶವನ್ನು ಯೋಜನಾ ಇಲಾಖೆಯ ಅನಧಿಕೃತ ಟಿಪ್ಪಣಿ:ಪಿಡಿ 37 ಎಂ&ಇ 2010, ದಿನಾಂಕ: 26.06.2010 ಹಾಗೂ ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಎಫ್‌ಡಿ 424 ವೆಚ್ಚ–9/2010, ದಿನಾಂಕ: 10.08.2010ರ ಸಹಮತಿಯೊಂದಿಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

ಯು.ಎನ್. ನಾಗೇಂದ್ರ
ಸರ್ಕಾರದ ಅಧೀನ ಕಾರ್ಯದರ್ಶಿ
ಕಾರ್ಮಿಕ ಇಲಾಖೆ

ಕರ್ನಾಟಕ ರಾಜ್ಯಪತ್ರ
ಅಧಿಕೃತವಾಗಿ ಪ್ರಕಟಿಸಲಾದುದು
ವಿಶೇಷ ಪತ್ರಿಕೆ

ಭಾಗ– I ಬೆಂಗಳೂರು, ಶುಕ್ರವಾರ, ಜನವರಿ 13, 2012 (ಪುಷ್ಯ 23, ಶಕ ವರ್ಷ 1933) ನಂ.30

ಕರ್ನಾಟಕ ಸರ್ಕಾರದ ನಡವಳಿಗಳು
ಕಾರ್ಮಿಕ ಸಚಿವಾಲಯ

ವಿಷಯ : ಕರ್ನಾಟಕ ರಾಜ್ಯ ವಾಣಿಜ್ಯ ವಾಹನ ಚಾಲಕರ ಅಪಘಾತ ಪರಿಹಾರ ಯೋಜನೆಯನ್ನು ಜಾರಿಗೊಳಿಸುವ ಬಗ್ಗೆ.

ಪ್ರಸ್ತಾವನೆ:

ಸನ್ಮಾನ್ಯ ಮುಖ್ಯಮಂತ್ರಿಗಳು 2011–12ನೇ ಸಾಲಿನ ಆಯವ್ಯಯ ಭಾಷಣದಲ್ಲಿ ಖಾಸಗಿ ವಾಹನಗಳಾದ ಆಟೋ, ಬಸ್, ಮ್ಯಾಕ್ಸಿ ಕ್ಯಾಬ್, ಲಾರಿ ಮತ್ತು ಟ್ಯಾಕ್ಸಿ ಚಾಲಕರುಗಳು ವಾಹನ ಚಲಾಯಿಸುತ್ತಿದ್ದಾಗ ಅಪಘಾತ ಗೊಂಡಲ್ಲಿ, ಅಂತಹವರ ಕುಟುಂಬ ವರ್ಗದವರಿಗೆ ವಿಮಾ ಯೋಜನೆಯ ಮುಖೇನ ಅಪಘಾತ ಪರಿಹಾರ ನೀಡಲು ₹2,00,00,000/– [ಎರಡು ಕೋಟಿ ರೂಪಾಯಿಗಳು] ಗಳನ್ನು ಕಾಯ್ದಿರಿಸಿರುತ್ತಾರೆ.

ಈ ಹಿನ್ನೆಲೆಯಲ್ಲಿ ಸತತವಾಗಿ ಅಪಘಾತಕ್ಕೆ ಈಡಾಗುವ ಅಪಾಯದಲ್ಲಿರುವ ಈ ಚಾಲಕರಿಗೆ ಹಾಗೂ ಅವರ ಕುಟುಂಬಗಳಿಗೆ ಅಪಘಾತ ಪರಿಹಾರ ನೀಡಲು "ಕರ್ನಾಟಕ ರಾಜ್ಯ ಖಾಸಗಿ ವಾಣಿಜ್ಯ ವಾಹನ ಚಾಲಕರ ಅಪಘಾತ ಪರಿಹಾರ ಯೋಜನೆ" ಎಂದು ಕರೆಯಲ್ಪಡುವ ಹೊಸ ಯೋಜನೆಯನ್ನು ಜಾರಿಗೆ ತರಲು ಸರ್ಕಾರವು ಉದ್ದೇಶಿಸಿದೆ. ಆದ್ದರಿಂದ ಈ ಕೆಳಗಿನ ಆದೇಶ.

ಸರ್ಕಾರದ ಆದೇಶ ಸಂಖ್ಯೆ: ಕಾಇ 40 ಎಲ್‌ಡಬ್ಲ್ಯೂಎ 2011, ಬೆಂಗಳೂರು, ದಿನಾಂಕ: 12-01-2012.

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಈ ಆದೇಶದೊಂದಿಗೆ ಲಗತ್ತಿಸಿರುವ ಅನುಬಂಧದಂತೆ "ಕರ್ನಾಟಕ ರಾಜ್ಯ ಖಾಸಗಿ ವಾಣಿಜ್ಯ ವಾಹನ ಚಾಲಕರ ಅಪಘಾತ ಪರಿಹಾರ ಯೋಜನೆ" ಯನ್ನು ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿಯ ಮುಖೇನ ಜಾರಿಗೊಳಿಸಲು ಅನುಮೋದನೆ ನೀಡಲಾಗಿದೆ; ಹಾಗೂ ಈ ಯೋಜನೆ ಅನುಷ್ಠಾನಕ್ಕಾಗಿ 2011-12ನೇ ಸಾಲಿನ ಆಯವ್ಯಯ ಲೆಕ್ಕ ಶೀರ್ಷಿಕೆ 2230-01-800-0-05 ಅಡಿ ಒದಗಿಸಿರುವ ₹2,00,00,000/- [ಎರಡು ಕೋಟಿ ರೂಪಾಯಿಗಳು] ಗಳನ್ನು ಸದರಿ ಯೋಜನೆಗಾಗಿ ಖರ್ಚು ಮಾಡಲು ಸರ್ಕಾರದ ಮಂಜೂರಾತಿಯನ್ನು ನೀಡಲಾಗಿದೆ.

ಈ ಆದೇಶವನ್ನು ಯೋಜನಾ ಇಲಾಖೆಯ ಟಿಪ್ಪಣಿ ಸಂಖ್ಯೆ: PD 36 M&E 2011, ದಿನಾಂಕ: 15-10-2011 ಮತ್ತು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ:FD 515 Exp-9/2011, ದಿನಾಂಕ: 26-11-2011ರಲ್ಲಿ ನೀಡಿರುವ ಸಹಮತಿಯ ಮೇರೆಗೆ ಹಾಗೂ ಸಚಿವ ಸಂಪುಟದ ಪ್ರಕರಣ ಸಂಖ್ಯೆ: ಸಿ:610/2011, ದಿನಾಂಕ: 31-12-2011ರಲ್ಲಿ ನೀಡಿರುವ ಅನುಮೋದನೆಯ ಮೇರೆಗೆ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

ಎನ್.ಆರ್.ಪ್ರಭು
ಸರ್ಕಾರದ ಅಧೀನ ಕಾರ್ಯದರ್ಶಿ
ಕಾರ್ಮಿಕ ಇಲಾಖೆ

Annexure
Karnataka State Commercial Vehicle Drivers' Association Benefit Scheme

1. Objectives:

The drivers engaged in private commercial vehicles, such as Auto, Taxi, Maxi cab, Lorry and Private Bus are constantly exposed to hazards of accident. In the event of an accident, the drivers either meet with death or suffer permanent total or permanent partial disability. In the case of death of the driver, the family which is dependent on the income of the deceased driver is put to untold misery resulting into suffering due to loss of income leading to starvation. In the case of the drivers affected by permanent total disability, the earnings are reduced to nil. As a result, the life of the disabled driver and his family turns wrecked.

In the case of permanent partial disablement, the affected driver's income is reduced. As a result the family of the driver find it difficult to meet the livelihood needs.

Therefore, there is an urgent need to address this issue by providing relief to the affected drivers and the families of the deceased drivers. This will go a long way in mitigating their hardship.

Hence, accident compensation through insurance coverage is one of the means to provide relief in such cases. A scheme in this regard is proposed as under.

2. Name of the Scheme:

This Scheme may be called "Karnataka State Commercial Vehicle Drivers' Accident Benefit Scheme";

3. Scope and Coverage :

(i) It shall come into force the date of publication in the Official Gazette;

(ii) It extends to the whole of Karnataka;

(iii) This Scheme is applicable to private commercial vehicle drivers, such as, Auto, Taxi, Maxi cab, Lorry and Private Bus Drivers.

(iv) Types of accidents covered are:-

(a) Accident resulting in death of the driver;

(b) Accident resulting in permanent total disability;

(c) Accident resulting in permanent partial disability.

4. Accident Cover :

i. This Scheme is applicable to private commercial vehicle drivers possessing driving licence issued in the State of Karnataka.

ii. These drivers shall also register with the Kanataka State Unorganised Worker's Social Security Board by paying a one time registration fee of Rs. 25/-

iii. Age group of the drivers shall be between 20 to 70 years

iv. The registered commercial vehicle drivers throughout the State of Karnataka to be covered under the Scheme (total figures of drivers shall be as provided by the Board);

v. Coverage shall be in respect of both o duty as well as off duty ;

vi. Sum assured is Rs. 2,00,000/-

5. Exceptions:

The claim is liable to be rejected in the following cases:-

1. If the driver is under the influence of either liquor or drug;
2. Accident arising or resulting from the driver;s insanity;
3. Accident arising or resulting from the driver committing any breach of law with criminal intent;
4. Accident arising or resulting due to war, invasion, act of foreign enemy, rebellion, revolution, mutiny, military or usurped power, seizure, capture, arrest and so on;
5. Accident arising or resulting from nuclear materials.

6. Quantum of Compensation :-

List of injuries deemed to Result in Permanent total Disablement

Sl. No.	Description of Injury	Percentage Of Capital Sum Insured
1	Loss of both hands or amputation at higher sites	100
2	Loss of a hand and a foot	100
3	Double amputation through leg or thigh, or amputation through leg or thigh on one side and loss of other foot	100
4	Loss of sight to such an extent as to render the claimant unable to	100

	perform any work for which eye-sight is essential	
5	Very severe facial disfigurement	100
6	Absolute deafness	100

List of injuries deemed to Result in Permanent total Disablement

Sl. No.	Description of Injury	Percentage of Capital Sum Insured
1	2	3
Amputation cases-upper limbs (either arm)		
1	Amputation through shoulder joint	90
2	Amputation below shoulder with stump less than [20.32 Cms.] from tip of acromion	80
3	Amputation from [20.32 cms.] from tip of acromion to less than [11.43 Cms.] below tip of olecranon	70
4	Loss of a hand or of the thumb and four fingers of one hand or amputation from [11.43 Cms.] below tip of olecranon	60
5	Loss of thumb	30
6	Loss of thumb and its metacarpal bone	40
7	Loss of four fingers of one hand	50
8	Loss of three fingers of one hand	30
9	Loss of two fingers of one hand	20
10	Loss of terminal phalanx of thumb	20

10A	Guillotine amputation of tip of thumb without loss of bone	10
Amputation cases – lower limbs		
11	Amputation of both feet resulting in end bearing stumps	90
12	Amputation through both feet proximal to the metatarso-phalangeal joint	80
13	Loss of all toes of both feet through the metatarso-phalangeal joint	40
14	Loss of all toes of both feet proximal to the proximal inter-phalangeal joint	30
Amputation cases-upper limbs (either arm)		
15	Loss of all toes of both feet distal to the proximal inter- phalangeal joint	20
16	Amputation at hip	90
17	Amputation below hip with stump not exceeding [12.70 Cms.] in length measured from tip of great trenchanter	80
18	Amputation below hip with stump not exceeding [12.70 Cms.] in length measured from tip of great trenchanter but not beyond middle thigh	70
19	Amputation below middle thigh to [8.89 Cms.] below knee	60
20	Amputation below knee with stump exceeding [8.89 cms.] but not exceeding [12.70 Cms.]	50
21	Amputation below knee with stump exceeding [12.70 Cms.]	50

22	Amputation of one foot resulting in end bearing	50
23	Amputation through one foot proximal to the metatarso-phalangeal joint	50
24	Loss of all toes of one foot through the metatarso-phalangeal joint	20
Other injuries		
25	Loss of one eye, without complications, the other being normal	40
26	Loss of vision of one eye, without complications or disfigurement of eye-ball, the other being normal	30
26A	Loss of partial vision of one eye	10
A-Fingers of right or Left hand Index finger		
27	Whole	14
28	Two phalanges	11
29	One Phalanx	9
30	Guillotine amputation of tip without loss of bone	5
Middle finger		
31	Whole	12
32	Two phalanges	9
33	One Phalanx	7
34	Guillotine amputation of tip without loss of bone	4
Ring or little finger		
35	Whole	10
36	Two phalanges	8
37	One Phalanx	6
38	Guillotine amputation of tip without loss of bone	4

B- Toes of right or left foot Great toe		
39	Through metatarso-phalangeal joint	14
40	Part, with some loss of bone	4
Any other toe		
41	Through metatarso-phalangeal joint	4
42	Part, with some loss of bone	3
Amputation cases-upper limbs (either arm)		
Two toes of one foot, excluding great toe		
43	Through metatarso-phalangeal joint	8
44	Part, with some loss of bone	5
Three toes of one foot, excluding great toe		
45	Through metatarso-phalangeal joint	6
46	Part, with some loss of bone	5
Four toes of one foot, excluding great toe		
47	Through metatarso-phalangeal joint	9
48	Part, with some loss of bone	5

[Note:- Complete and permanent loss of the use of any limb or member referred to in the list shall be deemed to be the equivalent of the loss of that limb or member.]

7. Procedure for Claim:-

(i) The identification and coverage of the beneficiary shall be as per the records of RTOs in Karnataka.

(ii) The notice of claim shall be submitted to the insurance company within 6 months from the date of accident.

(iii) In case of permanent total disablement or permanent partial disablement claims. Claim from shall be accompanied with RTO driving licence extract, badge (in case of passenger vehicles), medical certificates and bills.

(iv) In case of death claim, legal heir of the deceased driver to furnish the death certificate, post-mortem report, RTO driving licence extract, badge (in case of passenger vehicles) survival certificate and so on along with claim form.

8. Settlement of the Claim:

Claims shall be settled by the insurance company selected through competitive bidding throughout the State within the stipulated time by the Board.

9. Arbitration:

If any dispute or difference arise as to the quantum to be paid under the scheme (liability being otherwise admitted) such difference shall, independent of all other questions be referred to decision of arbitrators to be appointed in writing by the Board and insurance company jointly and arbitration shall be conducted under and in accordance with the provisions of the Arbitration and Conciliation Act, 1996.

10. Resources for the Scheme:-

Funds allocated by the State Government every year.

11. Agency that will implement the Scheme:-

The Karnataka State Unorganised Worker's Social Security Board (KSUWSSB).

12. Administration of the Scheme:-

Insurance Company that shall be selected through tender floated by KSUWSSB.

13. Tendering for Insurance Cover:

The Karnataka State Unorganised Workers' Social Security Board shall float a tender as per the provisions of The Karnataka Transparency In Public Procurements Act, 1999, and select the insurance company to implement the Scheme.

14. Funds for administrative and IEC activities:-

Out of the total allocated funds released by the State Government, the KSUWSSB shall utilise 5% and 10% of the funds towards administrative and IEC activities of the scheme respectively.

ಎನ್.ಆರ್.ಪ್ರಭು
ಸರ್ಕಾರದ ಅಧೀನ ಕಾರ್ಯದರ್ಶಿ
ಕಾರ್ಮಿಕ ಇಲಾಖೆ

ಅನುಬಂಧ-1 (1)

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಖಾಸಗಿ ಕೈಗಾರಿಕಾ ತರಬೇತಿ ಕೇಂದ್ರಗಳಿಗೆ ವಿದ್ಯಾರ್ಥಿ ಕೇಂದ್ರೀಕೃತ ಅನುದಾನ ನೀಡುವ ಬಗ್ಗೆ ಆದೇಶ.

ಓದಲಾಗಿದೆ: ಆಯುಕ್ತರು, ಉದ್ಯೋಗ ಮತ್ತು ತರಬೇತಿ ಇಲಾಖೆ ಇವರ ಪತ್ರ ಸಂ.ಉತಇ/ತ/ಸಂ-2/ವಿವ-01/2010-11 ದಿನಾಂಕ: 20/04/2010.

ಪ್ರಸ್ತಾವನೆ :

ಮೇಲೆ ಓದಲಾದ ಆಯುಕ್ತರು, ಉದ್ಯೋಗ ಮತ್ತು ತರಬೇತಿ ಇಲಾಖೆ ಇವರ ಪತ್ರದಲ್ಲಿ ಪ್ರಸ್ತುತ ರಾಜ್ಯದಲ್ಲಿ 158 ಸರ್ಕಾರಿ, 1110 ಖಾಸಗಿ ಕೈಗಾರಿಕಾ ತರಬೇತಿ ಕೇಂದ್ರಗಳು ಕಾರ್ಯನಿರ್ವಹಿಸುತ್ತಿದ್ದು, ಈ ಪೈಕಿ 146 ಖಾಸಗಿ ಸಂಸ್ಥೆಗಳ ಅರ್ಹ 1668 ಸಿಬ್ಬಂದಿಗಳಿಗೆ ಸರ್ಕಾರವು ಶೇ.100 ರಷ್ಟು ವೇತನಾನುದಾನವನ್ನು ನೀಡುತ್ತಿರುವುದಾಗಿ ವರದಿ ಮಾಡಿರುತ್ತಾರೆ. ಅಲ್ಲದೆ

ಖಾಸಗಿ ಸಂಸ್ಥೆಗಳ ಸಿಬ್ಬಂದಿಗಳಿಗೆ ಪ್ರಸ್ತುತ ಜಾರಿಯಲ್ಲಿರುವ ವೇತನಾನುದಾನ ಸಂಹಿತೆಯನುಸಾರ ವೇತನಾನುದಾನ ನೀಡುವ ಬದಲು ಶ್ರೀ ಪಿ.ಎಸ್.ಎಸ್. ಥಾಮಸ್ ಇವರ ಖಾಸಗಿ ವೆಚ್ಚಗಳ ಅಧ್ಯಯನ ವರದಿಯು ಶಿಫಾರಸ್ಸಿನಂತೆ ವಿದ್ಯಾರ್ಥಿ ಕೇಂದ್ರೀಕೃತ ಸಹಾಯಾನುದಾನ ನೀಡುವುದು ಸೂಕ್ತವೆಂದು ಸರ್ಕಾರವು ಪರಿಗಣಿಸಿದೆ. ಅಲ್ಲದೆ ಮಾನ್ಯ ಮುಖ್ಯಮಂತ್ರಿಗಳು 2010–11ನೇ ಸಾಲಿನ ಆಯವ್ಯಯ ಭಾಷಣದಲ್ಲಿ "ರಾಜ್ಯದಲ್ಲಿ ಈಗಾಗಲೇ ಪ್ರಾರಂಭಿಸಲಾಗಿರುವ ಖಾಸಗಿ ಕೈಗರಿಕಾ ತರಬೇತಿ ಸಂಸ್ಥೆಗಳಿಗೆ ಪ್ರತಿ ವಿದ್ಯಾರ್ಥಿಗೆ ಪ್ರತಿವರ್ಷ ರೂ.6000 ರಂತೆ ಅನುದಾನವನ್ನು ನೀಡುವ ನೂತನ ಅನುದಾನ ಪದ್ಧತಿಯ ಜಾರಿಗಾಗಿ ರೂ.50 ಕೋಟಿ ನೀಡಲಾಗುವುದು" ಎಂದು ಘೋಷಿಸಿರುತ್ತಾರೆ.

ಈ ಯೋಜನೆಯನ್ನು ರಾಜ್ಯದ ಅನುದಾನರಹಿತ ಎಲ್ಲಾ ಖಾಸಗಿ ಕೈಗಾರಿಕಾ ತರಬೇತಿ ಕೇಂದ್ರಗಳ, ಎನ್‌ಸಿವಿಟಿ ಯಿಂದ ಸಂಯೋಜನೆ ಹೊಂದಿರುವ ಎಲ್ಲಾ ವೃತ್ತಿ/ಘಟಕಗಳಿಗೆ ಹಾಗೂ 146 ಅನುದಾನಿತ ಕೈಗಾರಿಕಾ ತರಬೇತಿ ಕೇಂದ್ರಗಳ, ಸರ್ಕಾರ ವೇತನಾನುದಾನ ನೀಡಿಲ್ಲದ ವೃತ್ತಿ/ ಘಟಕಗಳಿಗೆ ಈ ಕೆಳಗಿನ ಷರತ್ತುಗಳಿಗೊಳಪಡಿಸಿ ಜಾರಿಗೆ ತರಬಹುದಾಗಿದೆ ಎಂದು ತಿಳಿಸಿರುತ್ತಾರೆ.

1. ಈ ಯೋಜನೆಯು ಈಗಾಗಲೇ ಜಾರಿಯಲ್ಲಿರುವ ವೇತನಾನುದಾನ ಸಂಹಿತೆಯಡಿಯಲ್ಲಿ ವೇತನಾನುದಾನ ಪಡೆಯುತ್ತಿರುವ ವೃತ್ತಿ/ಘಟಕಗಳನ್ನು ಹೊರತುಪಡಿಸಿ, ದಿನಾಂಕ: 31–06–2010 ರೊಳಗೆ ಸಂಯೋಜನೆ ಪಡೆದ ಉಳಿದೆಲ್ಲ ಸಂಸ್ಥೆಗಳ ಸಂಯೋಜನೆ ಹೊಂದಿರುವ ವೃತ್ತಿ/ಘಟಕಗಳಿಗೆ ಅನ್ವಯಿಸುತ್ತದೆ.
2. ಈ ಸಂಸ್ಥೆಗಳಲ್ಲಿ ಲಭ್ಯವಿರುವ ಒಟ್ಟು ಸ್ಥಾನಗಳನ್ನು ಆಯಾ ಸಂಸ್ಥೆಗಳು ಮೀಸಲಾತಿ ನಿಯಮದ ಪ್ರಕಾರ ಭರ್ತಿ ಮಾಡಿಕೊಳ್ಳುವುದು. ಪ್ರವೇಶಾತಿ ಸಂಬಂಧ ಸರ್ಕಾರ ಹೊರಡಿಸುವ ಮಾರ್ಗಸೂಚಿಗಳಿಗೆ ಬದ್ಧವಾಗಿರಬೇಕಾಗುತ್ತದೆ.
3. ಈ ಸಂಸ್ಥೆಗಳಲ್ಲಿ ಪ್ರತಿ ವೃತ್ತಿ/ಘಟಕಕ್ಕೆ ಡಿ.ಜಿ.ಇ.ಟಿ. ನಿಯಮಾನುಸಾರ ಅರ್ಹ ಸಿಬ್ಬಂದಿಗಳಿರಬೇಕು.
4. ಈ ಯೋಜನೆಯಡಿ ಆರ್ಥಿಕ ಸೌಲಭ್ಯ ದಿನಾಂಕ: 01–04–2010 ರಿಂದ ಜಾರಿಗೆ ಬರುತ್ತದೆ.

5. ಮೇಲಿನ ಯಾವುದೇ ನಿಂದನೆಗಳನ್ನು ಪಾಲಿಸದ ಹಾಗೂ ಡಿಜಿಇಟಿ ನಿಯಮಾನುಸಾರ ತರಬೇತಿ ನೀಡದೆ ಇರುವುದು ತನಿಖೆಗಳಲ್ಲಿ ಕಂಡು ಬಂದರೆ ಕೂಡಲೇ ಈ ಅನುದಾನವನ್ನು ನಿಲ್ಲಿಸಲಾಗುವುದು. ಜೊತೆಗೆ ಶಿಸ್ತು ಕ್ರಮ ಜರುಗಿಸಲಾಗುವುದು ಹಾಗೂ ಸಂಯೋಜನೆಯನ್ನು ಹಿಂದಕ್ಕೆ ಪಡೆಯಲು ಕ್ರಮ ತೆಗೆದುಕೊಳ್ಳಲಾಗುವುದು.
6. ಈ ಬಗ್ಗೆ ಎಲ್ಲಾ ನಿಬಂಧನೆಗಳನ್ನು, ಷರತ್ತುಗಳನ್ನು ಒಪ್ಪಿರುವ ಬಗ್ಗೆ ಪ್ರತಿ ಸಂಸ್ಥೆಯ ಆಡಳಿತ ಮಂಡಳಿ ಇಲಾಖೆಗೆ ಮುಚ್ಚಳಿಕೆ ನೀಡಬೇಕಾಗುತ್ತದೆ.

ಪ್ರಸ್ತಾವನೆಯನ್ನು ಪರಿಶೀಲಿಸಿದ ನಂತರ ಕೆಳಗಿನಂತೆ ಆದೇಶಿಸಲಾಗಿದೆ.

ಸರ್ಕಾರಿ ಆದೇಶ ಸಂಖ್ಯೆ ಕಾಇ 118 ಇಟಿಐ 2010 ಬೆಂಗಳೂರು, ದಿನಾಂಕ: 30/08/2010

ಪ್ರಸ್ತಾವನೆಯಲ್ಲಿ ವಿವರಿಸಿರುವ ಹಿನ್ನೆಲೆಯಲ್ಲಿ ರಾಜ್ಯದ ಖಾಸಗಿ ಕೈಗಾರಿಕಾ ತರಬೇತಿ ಕೇಂದ್ರಗಳಿಗೆ ವಿದ್ಯಾರ್ಥಿ ಆಧಾರಿತ ಅನುದಾನ ಪದ್ಧತಿ ಯನ್ನು ಈ ಕೆಳಕಂಡ ನಿಬಂಧನೆಗಳಿಗೆ ಒಳಪಟ್ಟು ದಿನಾಂಕ: 01/04/2010 ರಿಂದ ಜಾರಿಗೆ ತರಲು ಮಂಜೂರಾತಿ ನೀಡಲಾಗಿದೆ.

1. ಈ ಯೋಜನೆಯು ಈಗಾಗಲೇ ಜಾರಿಯಲ್ಲಿರುವ ವೇತನಾ ನುದಾನ ಸಂಹಿತೆಯಡಿಯಲ್ಲಿ ವೇತನಾನುದಾನ ಪಡೆಯುತ್ತಿರುವ ವೃತ್ತಿ/ಘಟಕಗಳನ್ನು ಹೊರತುಪಡಿಸಿ, ದಿನಾಂಕ: 31-06-2010 ರೊಳಗೆ ಸಂಯೋಜನೆ ಪಡೆದ ಉಳಿದೆಲ್ಲ ಸಂಸ್ಥೆಗಳ ಸಂಯೋಜನೆ ಹೊಂದಿರುವ ವೃತ್ತಿ/ಘಟಕಗಳಿಗೆ ಅನ್ವಯಿಸುತ್ತದೆ.
2. ಈ ಸಂಸ್ಥೆಗಳಲ್ಲಿ ಲಭ್ಯವಿರುವ ಒಟ್ಟು ಸ್ಥಾನಗಳನ್ನು ಆಯಾ ಸಂಸ್ಥೆಗಳು ಮೀಸಲಾತಿ ನಿಯಮದ ಪ್ರಕಾರ ಭರ್ತಿ ಮಾಡಿ ಕೊಳ್ಳುವುದು. ಪ್ರವೇಶಾತಿ ಸಂಬಂಧ ಸರ್ಕಾರ ಹೊರಡಿಸುವ ಮಾರ್ಗಸೂಚಿಗಳಿಗೆ ಬದ್ಧವಾಗಿರತಕ್ಕದ್ದು.

3. ಈ ಸಂಸ್ಥೆಗಳಲ್ಲಿ ಪ್ರತಿ ವೃತ್ತಿ/ಘಟಕಕ್ಕೆ ಡಿ.ಜಿ.ಇ.ಟಿ. ನಿಯಮಾನುಸಾರ ಅರ್ಹ ಸಿಬ್ಬಂದಿಗಳಿರಬೇಕು.
4. ಆಯಾ ಸಂಸ್ಥೆಗಳಿಗೆ ಆಯಾ ಹುದ್ದೆಯ ನಿಗದಿಪಡಿಸಲಾದ ಕನಿಷ್ಟಕ್ಕಿಂತ ಕಡಿಮೆ ಇಲ್ಲದ ವೇತನವನ್ನು ಬ್ಯಾಂಕ್ ಖಾತೆ ಮೂಲಕ ಪಾವತಿಸಬೇಕು.
5. ಎಲ್ಲಾ ವೃತ್ತಿ/ಘಟಕಗಳಿಗೆ ಡಿಜಿಇಟಿ ನಿಯಮಾನುಸಾರ ಇತ್ತೀಚಿನ ಪಠ್ಯಕ್ರಮದಂತೆ ಶೇ. 100 ಎಷ್ಟು ಯಂತ್ರೋಪಕರಣಗಳಿರಬೇಕು.
6. ತರಬೇತಿ ಪೂರ್ಣಗೊಳಿಸಿದ ವಿದ್ಯಾರ್ಥಿಗಳಿಗೆ ಉದ್ಯೋಗ ಒದಗಿಸಲು ಸೂಕ್ತವಾದ ಪ್ಲೇಸ್‌ಮೆಂಟ್ ಸೆಲ್ ಅನ್ನು ಪ್ರತಿ ಸಂಸ್ಥೆಯು ಸ್ಥಾಪಿಸಿ, ನಿರ್ವಹಿಸತಕ್ಕದ್ದು.
7. ಸಂಯೋಜನೆ ಹೊಂದಿರುವ ಪ್ರತಿ ವೃತ್ತಿ/ಘಟಕದಲ್ಲಿ ತರಬೇತಿ ಪಡೆಯುವ ವಿದ್ಯಾರ್ಥಿಗೆ ಒಂದು ವರ್ಷಕ್ಕೆ ಗರಿಷ್ಟ ರೂ. 6000/– ದಂತೆ ಅನುದಾನ ಲೆಕ್ಕ ಮಾಡಿ ಎರಡು ಕಂತುಗಳಲ್ಲಿ ಆಯಾ ಸಂಸ್ಥೆಗೆ ತರಬೇತಿ ವೆಚ್ಚದ ಭಾಗವನ್ನು ಭರಿಸಲು ಈ ಕೆಳಗಿನಂತೆ ನೀಡಲಾಗುವುದು.

   ಒಂದು ವರ್ಷದ ವೃತ್ತಿಗೆ 4 ಕಂತುಗಳಲ್ಲಿ ಪ್ರತಿ ಕಂತು ರೂ. 3000 ದಂತೆ
   ಎರಡು ವರ್ಷದ ವೃತ್ತಿಗೆ 4 ಕಂತುಗಳಲ್ಲಿ ಪ್ರತಿ ಕಂತು ರೂ. 3000 ದಂತೆ
   ಮೂರು ವರ್ಷದ ವೃತ್ತಿಗೆ 4 ಕಂತುಗಳಲ್ಲಿ ಪ್ರತಿ ಕಂತು ರೂ. 3000 ದಂತೆ

8. ಈ ಸಂಸ್ಥೆಗಳಲ್ಲಿ ಅನುದಾನಕ್ಕೆ ಪರಿಗಣಿಸುವ ಪ್ರವೇಶಗೊಂಡ ತರಬೇತಿ ಪಡೆಯುತ್ತಿರುವ ತರಬೇತಿದಾರನು ಶೇ.80 ರಷ್ಟು ಹಾಜರಾತಿ ಹೊಂದಿರಬೇಕು. ಈ ಹಾಜರಾತಿಯನ್ನು ಆರು ತಿಂಗಳ ಅವಧಿಯಲ್ಲಿ ಲೆಕ್ಕ ಹಾಕಿ ಪರಿಗಣಿಸಬೇಕು.

9. ವಿದ್ಯಾರ್ಥಿ ಕೇಂದ್ರೀಕೃತ ಅನುದಾನಕ್ಕಾಗಿ ನಿಗದಿತ ನಮೂನೆಯಲ್ಲಿ ಉದ್ಯೋಗ ಮತ್ತು ತರಬೇತಿ ಇಲಾಖೆ, ಕೌಶಲ್ಯ ಭವನ, ಡೈರಿ ವೃತ್ತ ಬೆಂಗಳೂರು –29 ಇಲ್ಲಿಗೆ ಅರ್ಜಿ ಸಲ್ಲಿಸಬೇಕು. ಅರ್ಜಿ ಜೊತೆಗೆ ಸಲ್ಲಿಸಬೇಕಾದ ನಿಗದಿತ ದಾಖಲೆಗಳನ್ನು ಅನುಬಂಧಗೊಳಿಸಲಾಗಿದೆ.

10. ಮೇಲಿನ ಯಾವುದೇ ನಿಬಂಧನೆಗಳನ್ನು ಪಾಲಿಸದ ಹಾಗೂ ಡಿಜಿಇಟಿ ನಿಯಮಾನುಸಾರ ತರಬೇತಿ ನೀಡದೆ ಇರುವುದು ತನಿಖೆಗಳಲ್ಲಿ ಕಂಡು ಬಂದರೆ ಕೂಡಲೇ ಅನುದಾನವನ್ನು ನಿಲ್ಲಿಸಲಾಗುವುದು. ಜೊತೆಗೆ ಶಿಸ್ತು ಕ್ರಮ ಜರುಗಿಸಲಾಗುವುದು ಹಾಗೂ ಸಂಯೋಜನೆಯನ್ನು ಹಿಂದಕ್ಕೆ ಪಡೆಯಲು ಕ್ರಮ ತೆಗೆದುಕೊಳ್ಳಲಾಗುವುದು.

11. ಈ ಬಗ್ಗೆ ಎಲ್ಲಾ ನಿಬಂಧನೆಗಳನ್ನು, ಷರತ್ತುಗಳನ್ನು ಒಪ್ಪಿರುವ ಬಗ್ಗೆ ಪ್ರತಿ ಸಂಸ್ಥೆಯ ಆಡಳಿತ ಮಂಡಳಿ ಇಲಾಖೆಗೆ ಮುಚ್ಚಳಿಕೆ ನೀಡತಕ್ಕದ್ದು.

12. ರಾಜ್ಯದಲ್ಲಿನ NCVT ಪ್ರಮಾಣೀಕರಿಸಿದ 5 ವರ್ಷ ಪೂರೈಸಿದ ವೇತನಾನುದಾನಕ್ಕೊಳಪಡದ ಖಾಸಗಿ ಕೈಗಾರಿಕಾ ತರಬೇತಿ ಕೇಂದ್ರಗಳಲ್ಲಿನ ಪ್ರತಿ ವಿದ್ಯಾರ್ಥಿಗೆ ರೂ.6,000 ರಂತೆ ವಿದ್ಯಾರ್ಥಿ ಆಧಾರಿತ ಸಹಾಯಾನುದಾನವನ್ನು ಈ ಕೆಳಕಂಡ ಉಪ ಷರತ್ತುಗಳಿಗನುಸಾರ ನೀಡುವುದು. ಇನ್ನು ಮುಂದೆ ಆರಂಭವಾಗುವ ಹೊಸ ಕೈಗಾರಿಕಾ ತರಬೇತಿ ಕೇಂದ್ರಗಳಿಗೂ ಸಹ ಇದು ಅನ್ವಯವಾಗುತ್ತದೆ.

ಅ. ಕನಿಷ್ಠ ಶೇ.75ರಷ್ಟು ವಿದ್ಯಾರ್ಥಿಗಳು ಉತ್ತೀರ್ಣರಾದಲ್ಲಿ ಎಲ್ಲಾ ವಿದ್ಯಾರ್ಥಿಗಳಿಗೆ ಪ್ರತಿ ವಿದ್ಯಾರ್ಥಿಗೆ ರೂ.6,000 ದಂತೆ;

ಆ. ಶೇ.75 ಕ್ಕಿಂತ ಕಡಿಮೆ ವಿದ್ಯಾರ್ಥಿಗಳು ಉತ್ತೀರ್ಣರಾದಲ್ಲಿ ಪ್ರತಿ ಶೇಕಡಾಂಶಕ್ಕೆ ಆವರ್ತಕ ಅನುದಾನವನ್ನು ಶೇ.2ರ ಪ್ರಮಾಣದಲ್ಲಿ ಕಡಿತಗೊಳಿಸಲಾಗುವುದು. (ಉದಾಹರಣೆಗೆ ಶೇ.60 ರಷ್ಟು ವಿದ್ಯಾರ್ಥಿಗಳು ಉತ್ತೀರ್ಣರಾದಲ್ಲಿ

ಶೇ.300ರಷ್ಟು (75-60)x2, i.e., 15x2=30 ವಿದ್ಯಾರ್ಥಿಗಳ ಅನುದಾನವನ್ನು ಕಡಿತಗೊಳಿಸಿ ಉಳಿದ ಶೇ.70 ರಷ್ಟು ವಿದ್ಯಾರ್ಥಿಗಳಿಗೆ ಅನುದಾನ ನೀಡಲಾಗುವುದು. ಅಂತೆಯೇ ಶೇ.50ರಷ್ಟು ವಿದ್ಯಾರ್ಥಿಗಳು ಮಾತ್ರ ಉತ್ತೀರ್ಣರಾದಲ್ಲಿ, ಶೇ.50 ರಷ್ಟು (75-50x2, i.e., 25x2) ವಿದ್ಯಾರ್ಥಿಗಳ ಅನುದಾನವನ್ನು ಕಡಿತಗೊಳಿಸಿ ಉಳಿದ ಶೇ.50 ರಷ್ಟು ವಿದ್ಯಾರ್ಥಿಗಳಿಗೆ ಮಾತ್ರ ಅನುದಾನವನ್ನು ಪಾವತಿಸಲಾಗುವುದು.

ಇ. ಶೇ.50 ಕ್ಕಿಂತ ಕಡಿಮೆ ವಿದ್ಯಾರ್ಥಿಗಳು ಉತ್ತೀರ್ಣರಾದಲ್ಲಿ ಶೇಕಡಾವಾರು ಪ್ರಮಾಣಕ್ಕನುಗುಣವಾಗಿ ಅನುದಾನವನ್ನು ಸೀಮಿತಗೊಳಿಸಲಾಗುವುದು. ಅಂದರೆ, ಶೇ.50ಕ್ಕೂ ಹೆಚ್ಚು ಪ್ರಮಾಣದಲ್ಲಿ ಅನುತ್ತೀರ್ಣತೆ ಇದ್ದಲ್ಲಿ ಕಡಿತವಾಗುವ ಅನುದಾನ ಶೇ.50+ಶೇ.50ರ ನಂತರದ ಪ್ರತಿ ಶೇ.1 ರ ಅನುತ್ತೀರ್ಣತೆಗೆ ಪ್ರತಿ ವಿದ್ಯಾರ್ಥಿಗೆ ಶೇ.1 ರಷ್ಟು, ಉದಾಹರಣೆಗೆ ಉತ್ತೀರ್ಣತೆ ಪ್ರಮಾಣ ಶೇ.40 ಆದಲ್ಲಿ ಅನುದಾನವನ್ನು ಶೇ.40 ರಷ್ಟು ವಿದ್ಯಾರ್ಥಿಗಳಿಗೆ ಆತ್ರ ಸೀಮಿತಗೊಳಿಸಲಾಗುವುದು.

ಈ. ಮೇಲ್ಕಂಡಂತೆ ಲೆಕ್ಕ ಮಾಡಲಾದ ಅನುದಾನವನ್ನು ಕೈಗಾರಿಕಾ ತರಬೇತಿ ಕೇಂದ್ರಕ್ಕೆ ಪಾವತಿಸುವುದೇ ಹೊರತು ವಿದ್ಯಾರ್ಥಿಗಳಿಗಲ್ಲ.

ಮೇಲಿನ ಯೋಜನೆಗಳಿಗನುಸಾರ ಇಲಾಖೆಯ ವೇತನಾನುದಾನ ಸಂಹಿತೆಯನ್ನು ಮರು ಪರಿಶೀಲಿಸಿ ಪರಿಷ್ಕೃತ ಕೋಡ್ ಸಿದ್ಧಪಡಿಸಿ ಆಯುಕ್ತರು, ಉದ್ಯೋಗ ಮತ್ತು ತರಬೇತಿ ಇಲಾಖೆ ಇವರು ಸರ್ಕಾರಕ್ಕೆ ಸಲ್ಲಿಸತಕ್ಕದ್ದು.

ಈ ಆದೇಶವನ್ನು ಯೋಜನಾ ಇಲಾಖೆಯ ಅನಧಿಕೃತ ಟಿಪ್ಪಣಿ ಸಂಖ್ಯೆ: ಪಿಡಿ 39 ಎಂ ಅಂಡ್ ಇ 2010 ದಿನಾಂಕ: 22/05/2010 ಹಾಗೂ ಆರ್ಥಿಕ ಇಲಾಖೆಯ ಅನಧಿಕೃತ ಟಿಪ್ಪಣಿ ಸಂಖ್ಯೆ: ಆಇ 292 ವೆಚ್ಚ-9/2010 ಆರ್.ಎಫ್. 42443, ದಿನಾಂಕ: 09/06/2010ರಲ್ಲಿ ನೀಡಿರುವ ಸಹಮತಿಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

ಎ.ಎಸ್. ವಿಶ್ವೇಶ್ವರಯ್ಯ
ಪೀಠಾಧಿಕಾರಿ
ಕಾರ್ಮಿಕ ಇಲಾಖೆ
(ಉದ್ಯೋಗ ಮತ್ತು ತರಬೇತಿ)

ಅನುಬಂಧ-1 (2)

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಸಾರ್ವಜನಿಕ, ಖಾಸಗಿ ಸಹಭಾಗಿತ್ವದಡಿಯಲ್ಲಿ ಖಾಸಗಿ ಕೈಗಾರಿಕಾ ತರಬೇತಿ ಕೇಂದ್ರಗಳ ಸ್ಥಾಪನೆಗೆ ಸರ್ಕಾರವು ಶೇ. 25 ರಷ್ಟು ಬಂಡವಾಳ ವೆಚ್ಚ ನೀಡುವ ಬಗ್ಗೆ.

ಓದಲಾಗಿದೆ: ಆಯುಕ್ತರು, ಉದ್ಯೋಗ ಮತ್ತು ತರಬೇತಿ ಇಲಾಖೆ ರವರ ಪತ್ರ ಸಂ.ಉತಇ/ತ/ಸಂ-2/ವಿವ-02/2010-11 ದಿನಾಂಕ: 20/04/2010.

ಪ್ರಸ್ತಾವನೆ:

ಮೇಲೆ ಓದಲಾದ ಆಯುಕ್ತರು, ಉದ್ಯೋಗ ಮತ್ತು ತರಬೇತಿ ಇಲಾಖೆ ಇವರು ತಮ್ಮ ಪತ್ರದಲ್ಲಿ ಮಾನ್ಯ ಮುಖ್ಯಮಂತ್ರಿಗಳು 2010-11ನೇ ಸಾಲಿನ ಆಯವ್ಯಯ ಭಾಷಣದಲ್ಲಿ ಈ ಕೆಳಗಿನಂತೆ ಘೋಷಿಸಿರುವರು ಎಂದು ತಿಳಿಸಿರುತ್ತಾರೆ.

"ಪ್ರತಿಯೊಂದು ನೂತನ ಕೈಗಾರಿಕಾ ತರಬೇತಿ ಸಂಸ್ಥೆಯ ಸ್ಥಾಪನೆಗೆ ರೂ. 25 ಲಕ್ಷಗಳ ಮಿತಿಯಲ್ಲಿ ಬಂಡವಾಳ ವೆಚ್ಚದ ಶೇ. 25 ರಷ್ಟು ಸಹಾಯಧನ ಒದಗಿಸಲಾಗುವುದು. ಡಾ. ನಂಜುಂಡಪ್ಪ ವರದಿಯಲ್ಲಿ ಗುರುತಿಸಲಾದ ಹಿಂದುಳಿದ ತಾಲ್ಲೂಕುಗಳಲ್ಲಿ ಸ್ಥಾಪಿಸುವ ಸಂಸ್ಥೆಗಳಿಗೆ ಶೇ.10 ರಷ್ಟು ಹೆಚ್ಚುವರಿ ಸಹಾಯಧನ ಒದಗಿಸಲಾಗುವುದು ಇದಕ್ಕಾಗಿ ರೂ.50 ಕೋಟಿ ಒದಗಿಸಿದೆ."

ಮುಂದುವರೆದು, ಸದರಿಯವರು ತರಬೇತಿಯ ಸಾಮರ್ಥ್ಯವನ್ನು ಪ್ರಸ್ತುತ 1.37 ಲಕ್ಷದಿಂದ ಮುಂದಿನ 3 ವರ್ಷಗಳಲ್ಲಿ 2.74 ಲಕ್ಷಕ್ಕೆ ಏರಿಸುವ ಗುರಿ ಹೊಂದಿದ್ದು, ಪ್ರಸ್ತುತ ಸಾಲಿನಲ್ಲಿ 200 ಹೊಸ ಖಾಸಗಿ ಕೈಗಾರಿಕಾ ತರಬೇತಿ ಕೇಂದ್ರಗಳನ್ನು ಈ ಯೋಜನೆಯಡಿ ಪ್ರಾರಂಭಿಸಲು ಪ್ರೋತ್ಸಾಹಿಸಲು ಉದ್ದೇಶಿಸಿದೆ ಎಂದು ತಿಳಿಸುತ್ತಾ, ಇದಕ್ಕಾಗಿ ಪ್ರತಿ ಸಂಸ್ಥೆಗೆ ರೂ.25 ಲಕ್ಷದಂತೆ 200 ಸಂಸ್ಥೆಗಳಿಗೆ ರೂ.50 ಕೋಟಿ ಸಹಾಯಾನು ದಾನವನ್ನು Back end investment subsidy ಮುಖಾಂತರ ನೀಡಲುದ್ದೇಶಿಸಿದೆಯೆಂದೂ, ಇದರಿಂದಾಗಿ 30,000 ಯುವ ಜನರಿಗೆ ತರಬೇತಿ ನೀಡಲು ಅವಕಾಶ ಕಲ್ಪಿಸಿದಂತಾಗುತ್ತದೆ ಎಂದು ತಿಳಿಸಿರುವರು.

ಮುಂದುವರೆದು ಈ ಯೋಜನೆಯಡಿಯಲ್ಲಿ ಅರ್ಹ ಖಾಸಗಿ ಕೈಗಾರಿಕಾ ತರಬೇತಿ ಕೇಂದ್ರಗಳಿಗೆ ಸಹಾಯಧನ ನೀಡಲು ಈ ಕೆಳಗಿನಂತೆ ಷರತ್ತುಗಳನ್ನು ವಿಧಿಸಬಹುದು ಎಂದು ತಿಳಿಸಿರುತ್ತಾರೆ.

1. ದಿನಾಂಕ: 01–07–2010ರ ನಂತರ ಕನಿಷ್ಠ 3 ಹೆಚ್ಚು ಬೇಡಿಕೆ ಇರುವ ವೃತ್ತಿಗಳು ಅಥವಾ ಕನಿಷ್ಠ 6 ಘಟಕಗಳೊಂದಿಗೆ ಪ್ರಾರಂಭಿಸಿ, ಸ್ಥಾಯಿ ಸಮಿತಿಯಿಂದ ಪರಿವೀಕ್ಷಣೆ ನಡೆಸಿ, ಡಿ.ಜಿ.ಇ.ಟಿ., ನವದೆಹಲಿಯಿಂದ ಸಂಯೋಜನೆ ಪಡೆದ ಘಟಕಗಳಿಗೆ ಮಾತ್ರ.
2. ಖಾಸಗಿ ಸಂಸ್ಥೆ ಪ್ರಾರಂಭಿಸಲು ನೋಂದಾಯಿತ ಸಂಘ–ಸಂಸ್ಥೆಗಳು ಉದ್ಯಮಗಳು/ಕೈಗಾರಿಕೆಗಳು/ಕೈಗಾರಿಕಾ ಸಂಘಗಳು ಮಾತ್ರ ಅರ್ಹರಿರುತ್ತವೆ.
3. ಕನಿಷ್ಠ ಒಂದು ಎಕರೆ ನಿವೇಶನವನ್ನು ಪುರಸಭೆ ವ್ಯಾಪ್ತಿಯಲ್ಲಿ ಅಥವಾ ಎರಡು ಎಕರೆ ನಿವೇಶನವನ್ನು ಉಳಿದ ಪ್ರದೇಶಗಳಲ್ಲಿ ಸ್ಥಾಪಿಸುವ ಸಂಸ್ಥೆಗಳು, ಸಂಸ್ಥೆಯ ಹೆಸರಿನಲ್ಲಿ ಹೊಂದಿದ್ದು,

ಸಂಸ್ಥೆಗಾಗಿ ಸ್ವಂತ ಕಟ್ಟಡ ನಿರ್ಮಿಸಿರಬೇಕು. ನಗರ ಪಾಲಿಕಾ ಪ್ರದೇಶಗಳಲ್ಲಿ ಡಿಜಿಇಟಿ ನಿಯಮಾನುಸಾರ ನಿಗದಿತ ವಿಸ್ತೀರ್ಣದ ಸ್ವಂತ ಕಟ್ಟಡವನ್ನು ಹೊಂದಿರಬೇಕು.

4. ಮೂಲಭೂತ ಸೌಕರ್ಯಗಳಾದ ಕಟ್ಟಡ ಅಂದರೆ ಕಾರ್ಯಾಗಾರ, ಬೋಧನಾ ಕೊಠಡಿ ಮೊದಲಾದವುಗಳು ಡಿ.ಜಿ.ಇ.ಟಿ. ನಿಯಮದಂತಿರಬೇಕು.
5. ಯಂತ್ರೋಪಕರಣಗಳು ಸಂಯೋಜನೆ ಪಡೆದ ಎಲ್ಲಾ ವೃತ್ತಿ/ಘಟಕಗಳಿಗೆ ಡಿಜಿಇಟಿ ಪಠ್ಯಕ್ರಮದಂತೆ ಶೇ.100 ರಷ್ಟಿರಬೇಕು. ಎಲ್ಲಾ ಉಪಕರಣಗಳು ಹೊಸದಾಗಿರಬೇಕು. ಈ ಎಲ್ಲಾ ಉಪಕರಣಗಳನ್ನು ಖರೀದಿಸಿದ್ದಕ್ಕೆ ರಸೀದಿಗಳು ಹಾಗೂ ತೆರಿಗೆ ಪಾವತಿಸಿದ ರಸೀದಿಗಳಿರಬೇಕು.
6. ಈ ಕ್ಷೇತ್ರದಲ್ಲಿ ಅನುಭವ:

   ವಿದ್ಯಾಸಂಸ್ಥೆಗಳು ಅಥವಾ ಕೈಗಾರಿಕೋದ್ಯಮಗಳನ್ನು ನಡೆಸಿರುವ ಬಗ್ಗೆ ಅನುಭವ:

   ಅ. ಐಟಿಐ ಅಥವಾ ತಾಂತ್ರಿಕ ವಿದ್ಯಾ ಸಂಸ್ಥೆಗಳನ್ನು ನಡೆಸುತ್ತಿದ್ದಲ್ಲಿ ಕನಿಷ್ಠ 3 ವರ್ಷಗಳ ಅನುಭವ

   ಆ. ತಾಂತ್ರಿಕೇತರ ವಿದ್ಯಾಸಂಸ್ಥೆಗಳನ್ನು ನಡೆಸುತ್ತಿದ್ದಲ್ಲಿ ಕನಿಷ್ಠ 5 ವರ್ಷಗಳ ಅನುಭವ

   ಇ. ಮಧ್ಯಮ ಅಥವಾ ಭಾರಿ ಪ್ರಮಾಣದ ಕೈಗಾರಿಕೋದ್ಯಮಗಳನ್ನು ನಡೆಸುತ್ತಿದ್ದಲ್ಲಿ, ಉತ್ಪಾದನೆ ಪ್ರಾರಂಭಿಸಿ 3 ವರ್ಷವಾಗಿರಬೇಕು.

7. ಡಿಜಿಇಟಿ ನಿಯಮದಂತೆ ಎಲ್ಲಾ ವೃತ್ತಿ/ಘಟಕಕ್ಕೂ ಅರ್ಹ ವಿದ್ಯಾರ್ಹತೆ ಹೊಂದಿರುವ ಬೋಧಕ ಮತ್ತು ಬೋಧಕೇತರ ಸಿಬ್ಬಂದಿ ನೇಮಕ ಮಾಡಿಕೊಂಡಿರಬೇಕು ಹಾಗೂ ನೇಮಕಾತಿ ಆದೇಶದಲ್ಲಿ ಕನಿಷ್ಠ ಮೂಲವೇತನ ನೀಡುವ ಬಗ್ಗೆ ಅಂದರೆ ಆಯಾ ಹುದ್ದೆಯ ವೇತನದ ಕನಿಷ್ಠ ವೇತನ ನೀಡುವ ಬಗ್ಗೆ ಉಲ್ಲೇಖಿಸಿರಬೇಕು.

8. ಕಾರ್ಯಾಗಾರದ ಕಟ್ಟಡಕ್ಕೆ 3 ಫೇಸ್ ವಿದ್ಯುತ್ ಹಾಗೂ ಡಿಜಿಇಟಿ ನಿಯಮದಂತೆ ಅಗತ್ಯ ವಿದ್ಯುತ್ ಲೋಡ್ ಪಡೆದಿರಬೇಕು, ಈ ವಿದ್ಯುತ್ ಸಂಪರ್ಕದ ದಾಖಲೆಗಳು ಸಂಸ್ಥೆಯ ಹೆಸರಿನಲ್ಲಿರಬೇಕು.
9. ದಿನಾಂಕ: 01-07-2010ರ ನಂತರ ಕನಿಷ್ಠ 3 ವೃತ್ತಿ ಅಥವಾ 6 ಘಟಕಗಳಿಗೆ ಡಿಜಿಇಟಿ, ನವದೆಹಲಿಯಿಂದ ಸಂಯೋಜನೆ ಬಿಡುಗಡೆ ಆದೇಶ ಪಡೆದಿರಬೇಕು.
10. ಸಂಸ್ಥೆಯ ಸ್ಥಿರ ಹಾಗೂ ಚರ ಆಸ್ತಿ ಅಂದರೆ ಕಟ್ಟಡ, ಯಂತ್ರೋಪಕರಣ? ವಿದ್ಯುತ್ ಸಂಪರ್ಕಕ್ಕೆ ತಗುಲಿದ ವೆಚ್ಚ ಇವುಗಳ ಮೊತ್ತದ (ನಿವೇಶನ ಹೊರತುಪಡಿಸಿ) ಶೇ. 25 ರಷ್ಟನ್ನು ಅಥವಾ ರೂ.25 ಲಕ್ಷ ಇವುಗಳಲ್ಲಿ ಯಾವುದು ಹೆಚ್ಚೋ ಅದನ್ನು Back end Investment subsidy ರೂಪದಲ್ಲಿ ಈ ಕೆಳಗಿನಂತೆ ಪಾವತಿಸಲಾಗುವುದು:

ಅ. Back end Investment subsidy ರೂಪದಲ್ಲಿ ಪಾವತಿಸುವ ಗರಿಷ್ಟ ಮೊತ್ತದ ಶೇ. 75 ರಷ್ಟನ್ನು ಈ ಬಗ್ಗೆ ರಚಿಸುವ ತಾಂತ್ರಿಕ ಸಮಿತಿಯ ವರದಿಯನ್ನಾಧರಿಸಿ ಹಾಗೂ

ಆ. ಉಳಿದ ಶೇ. 25 ರಷ್ಟನ್ನು ತರಬೇತಿದಾರರ ನೇಮಕಾತಿಯಾದ ನಂತರ ಮತ್ತು ತರಬೇತಿಯ ಮೊದಲ ಆರು ತಿಂಗಳ ಗುಣಮಟ್ಟ ಆಧರಿಸಿ, ಇಲಾಖಾ ಪರಿವೀಕ್ಷಣೆ ನಂತರ ಪಾವತಿಸಲಾಗುವುದು;

ಇ. ಮೇಲೆ ವಿವರಿಸಿದಂತೆ ಡಿಜಿಇಟಿಯಿಂದ ಸಂಯೋಜನೆ ಪಡೆದ ಒಂದು ತಿಂಗಳೊಳಗೆ ರೂ. 1000/-ವನ್ನು ಉದ್ಯೋಗ ಮತ್ತು ತರಬೇತಿ ಇಲಾಖೆಯ ಆಯುಕ್ತರ ಹೆಸರಿನಲ್ಲಿ ಹುಂಡಿ ಪಾವತಿಸಿ, ನಿಗದಿತ ಅರ್ಜಿಯನ್ನು ಹಾಗೂ ಮಾಹಿತಿ ಪುಸ್ತಕವನ್ನು ಪಡೆದು ಭರ್ತಿ ಮಾಡಿ ದಾಖಲೆಗಳೊಂದಿಗೆ ಉದ್ಯೋಗ ಮತ್ತು ತರಬೇತಿ ನಿರ್ದೇಶನಾಲಯ, ಕೌಶಲ್ಯ ಭವನ, ಡೈರಿ ವೃತ್ತ, ಬೆಂಗಳೂರು-29 ಇವರಿಗೆ ಸಲ್ಲಿಸುವುದು.

ಪ್ರಸ್ತಾವನೆಯನ್ನು ಪರಿಶೀಲಿಸಿದ ನಂತರ ಕೆಳಗಿನಂತೆ ಆದೇಶಿಸಲಾಗಿದೆ.

ಸರ್ಕಾರಿ ಆದೇಶ ಸಂಖ್ಯೆ ಕಾಇ 119 ಇಟಿಐ 2010 ಬೆಂಗಳೂರು, ದಿನಾಂಕ: 01/06/2010

ಪ್ರತಿಯೊಂದು ನೂತನ ಕೈಗಾರಿಕಾ ತರಬೇತಿ ಸಂಸ್ಥೆಯ ಸ್ಥಾಪನೆಗೆ ತಗಲುವ ಬಂಡವಾಳ ವೆಚ್ಚದ ಶೇ.25 ರಷ್ಟನ್ನು ರೂ.25 ಲಕ್ಷಗಳ ಮಿತಿ ಮೀರದಂತೆ ಹಾಗೂ ಡಾ. ನಂಜುಂಡಪ್ಪ ವರದಿಯಲ್ಲಿ ಗುರುತಿಸಲಾದ ಹಿಂದುಳಿದ ತಾಲ್ಲೂಕುಗಳಲ್ಲಿ ಸ್ಥಾಪಿಸುವ ಸಂಸ್ಥೆಗಳಿಗೆ ಶೇ.10 ರಷ್ಟು ಅಥವಾ ರೂ.10 ಲಕ್ಷ ಮೀರದಂತೆ ಹೆಚ್ಚುವರಿ ಅನುದಾನವನ್ನು ನೀಡಲು ಈ ಕೆಳಕಂಡ ನಿಬಂದನೆಗೊಳಪಟ್ಟು ಮಂಜೂರಾತಿ ನೀಡಲಾಗಿದೆ.

1. ಕೈಗಾರಿಕಾ ತರಬೇತಿ ಕೇಂದ್ರಗಳು ದಿನಾಂಕ: 01–07–2010 ಅಥವಾ ತದನಂತರ ಕನಿಷ್ಠ 3 ವೃತ್ತಿ ಅಥವಾ 6 ಘಟಕಗಳೊಂದಿಗೆ ಸ್ಥಾಯಿ ಸಮಿತಿಯ ಪರಿವೀಕ್ಷಣೆಯ ಆಧಾರದ ಮೇರೆಗೆ ಎನ್.ಸಿ.ವಿ.ಟಿ., ನವದೆಹಲಿ ಇವರಿಂದ ಸಂಯೋಜನೆ ಪಡೆದಿರತಕ್ಕದ್ದು. ಪ್ರಸ್ತುತ ಇರುವ ಕೈಗಾರಿಕಾ ತರಬೇತಿ ಕೇಂದ್ರಗಳು ಕನಿಷ್ಠ 3 ಹೊಸ ವೃತ್ತಿ ಅಥವಾ 6 ಹೊಸ ಘಟಕಗಳನ್ನು ಸೇರಿಸಿಕೊಂಡಲ್ಲಿ ಅಥವಾ ವಿಸ್ತರಣೆ ಮಾಡಿದಲ್ಲಿ ಇವುಗಳು ಸಹ ಸಬ್ಸಿಡಿಯನ್ನು ಪಡೆಯಲು ಅರ್ಹತೆಯನ್ನು ಪಡೆಯುತ್ತವೆ.
2. ಖಾಸಗಿ ಸಂಸ್ಥೆ ಪ್ರಾರಂಭಿಸಲು ನೋಂದಾಯಿತ ಸಂಘ–ಸಂಸ್ಥೆಗಳು ಉದ್ಯಮಗಳು/ಕೈಗಾರಿಕೆಗಳು/ಕೈಗಾರಿಕಾ ಸಂಘಗಳು ಮಾತ್ರ ಅರ್ಹರಿರುತ್ತವೆ.
3. ಕೈಗಾರಿಕಾ ತರಬೇತಿ ಕೇಂದ್ರ ಪ್ರಾರಂಭಿಸಲು ಡಿಜಿಇಟಿ ನಿಯಮಾನುಸಾರ ನಿಗದಿತ ವಿಸ್ತೀರ್ಣದ ಭೂಮಿ ಹಾಗೂ ಸ್ವಂತ ಕಟ್ಟಡವನ್ನು ಹೊಂದಿರಬೇಕು.
4. ಮೂಲಭೂತ ಸೌಕರ್ಯಗಳಲ್ಲಿ ಒಂದಾದ ಕಟ್ಟಡ ಅಂದರೆ ಕಾರ್ಯಾಗಾರ, ಬೋಧನಾ ಕೊಠಡಿ ಮೊದಲಾದವುಗಳು ಡಿ.ಜಿ.ಇ.ಟಿ. ನಿಯಮದಂತಿರಬೇಕು.

5. ಯಂತ್ರೋಪಕರಣಗಳು ಸಂಯೋಜನೆ ಪಡೆದ ಎಲ್ಲಾ ವೃತ್ತಿ/ಘಟಕಗಳಿಗೆ ಡಿಜಿಇಟಿ ಪಠ್ಯಕ್ರಮದಂತೆ ಶೇ.100 ರಷ್ಟಿರಬೇಕು. ಎಲ್ಲಾ ಉಪಕರಣಗಳು ಹೊಸದಾಗಿರಬೇಕು. ಈ ಎಲ್ಲಾ ಉಪಕರಣಗಳನ್ನು ಖರೀದಿಸಿದ್ದಕ್ಕೆ ರಸೀದಿಗಳು ಹಾಗೂ ತೆರಿಗೆ ಪಾವತಿಸಿದ ರಸೀದಿಗಳಿರಬೇಕು.
6. ಈ ಕ್ಷೇತ್ರದಲ್ಲಿ ಅನುಭವ:
ವಿದ್ಯಾಸಂಸ್ಥೆಗಳು ಅಥವಾ ಕೈಗಾರಿಕೋದ್ಯಮಗಳನ್ನು ನಡೆಸಿರುವ ಬಗ್ಗೆ ಅನುಭವ:

ಅ. ಐಟಿಐ ಅಥವಾ ತಾಂತ್ರಿಕ ವಿದ್ಯಾ ಸಂಸ್ಥೆಗಳನ್ನು ನಡೆಸುತ್ತಿದ್ದಲ್ಲಿ ಕನಿಷ್ಠ 3 ವರ್ಷಗಳ ಅನುಭವ

ಅಥವಾ

ಆ. ತಾಂತ್ರಿಕೇತರ ವಿದ್ಯಾಸಂಸ್ಥೆಗಳನ್ನು ನಡೆಸುತ್ತಿದ್ದಲ್ಲಿ ಕನಿಷ್ಠ 5 ವರ್ಷಗಳ ಅನುಭವ

ಅಥವಾ

ಇ. ಭಾರಿ ಅಥವಾ ಮಧ್ಯಮ ಪ್ರಮಾಣದ ಕೈಗಾರಿಕೋಧ್ಯಮಗಳನ್ನು ನಡೆಸುತ್ತಿದ್ದಲ್ಲಿ, ಉತ್ಪಾದನೆ ಪ್ರಾರಂಭಿಸಿ 3 ವರ್ಷವಾಗಿರಬೇಕು.

7. ಡಿಜಿಇಟಿ ನಿಯಮದಂತೆ ಎಲ್ಲಾ ವೃತ್ತಿ/ಘಟಕಕ್ಕೂ ಅರ್ಹ ವಿದ್ಯಾರ್ಹತೆ ಹೊಂದಿರುವ ಬೋಧಕ ಮತ್ತು ಬೋಧಕೇತರ ಸಿಬ್ಬಂದಿ ನೇಮಕ ಮಾಡಿಕೊಂಡರಬೇಕು ಹಾಗೂ ನೇಮಕಾತಿ ಆದೇಶದಲ್ಲಿ ಕನಿಷ್ಠ ಮೂಲವೇತನ ನೀಡುವ ಬಗ್ಗೆ ಅಂದರೆ ಆಯಾ ಹುದ್ದೆಯ ವೇತನದ ಕನಿಷ್ಠ ವೇತನ ನೀಡುವ ಬಗ್ಗೆ ಉಲ್ಲೇಖಿಸಿರಬೇಕು.
8. ಕಾರ್ಯಾಗಾರದ ಕಟ್ಟಡಕ್ಕೆ 3 ಫೇಸ್ ವಿದ್ಯುತ್ ಹಾಗೂ ಡಿಜಿಇಟಿ ನಿಯಮದಂತೆ ಅಗತ್ಯ ವಿದ್ಯುತ್ ಲೋಡ್ ಪಡೆದಿರಬೇಕು, ಈ ವಿದ್ಯುತ್ ಸಂಪರ್ಕದ ದಾಖಲೆಗಳು ಸಂಸ್ಥೆಯ ಹೆಸರಿನಲ್ಲಿರಬೇಕು.

9. ದಿನಾಂಕ: 01-07-2010ರ ನಂತರ ಕನಿಷ್ಠ 3 ವೃತ್ತಿ ಅಥವಾ 6 ಘಟಕಗಳಿಗೆ ಡಿಜಿಇಟಿ, ನವದೆಹಲಿಯಿಂದ ಸಂಯೋಜನೆ ಬಿಡುಗಡೆ ಆದೇಶ ಪಡೆದಿರಬೇಕು.

10. ಬಂಡವಾಳ ವೆಚ್ಚವು ಕೈಗಾರಿಕಾ ತರಬೇತಿ ಕೇಂದ್ರವನ್ನು ನಡೆಸುವುದಕ್ಕೆಂದೇ ಉಪಯೋಗಿಸಲ್ಪಡುವ ಕಟ್ಟಡದ ವೆಚ್ಚ, ತರಬೇತಿ ನೀಡುವ ಸಲುವಾಗಿಯೇ ವೃತ್ತಿಯ ಎನ್.ಸಿ.ವಿ.ಟಿ. ಸಿಲಬಸ್ ಅಡಿಯಲ್ಲಿ ನಿಗದಿಪಡಿಸಿರುವ ತಾಂತ್ರಿಕತೆ, ಉಪಕರಣಗಳು, ಯಂತ್ರೋಪಕರಣಗಳ ಖರೀದಿಗಾಗಿ ತಗಲುವ ವೆಚ್ಚ ಹಾಗೂ ವಿದ್ಯುತ್ ವೆಚ್ಚವನ್ನೂ ಒಳಗೊಂಡಿರುತ್ತದೆ. ಆದರೆ ನಿವೇಶನದ ವೆಚ್ಚವನ್ನು ಒಳಗೊಂಡಿರುವುದಿಲ್ಲ. ಬಂಡವಾಳ ವೆಚ್ಚದ ಶೇ. 25 ರಷ್ಟನ್ನು ರೂ. 25 ಲಕ್ಷಗಳ ಮಿತಿಯಲ್ಲಿ Back end Investment subsidy ರೂಪದಲ್ಲಿ ಈ ಕೆಳಗಿನಂತೆ ಪಾವತಿಸಲಾಗುವುದು;

ಅ. Back end Investment subsidy ರೂಪದಲ್ಲಿ ಪಾವತಿಸುವ ಗರಿಷ್ಟ ಮೊತ್ತದ ಶೇ. 75 ರಷ್ಟನ್ನು ಈ ಬಗ್ಗೆ ತಾಂತ್ರಿಕ ಸಮಿತಿಯ ವರದಿಯನ್ನಾಧರಿಸಿ ಹಾಗೂ

ಆ. ಉಳಿದ ಶೇ. 25 ರಷ್ಟನ್ನು ತರಬೇತಿದಾರರ ನೇಮಕಾತಿಯಾದ ನಂತರ ಮತ್ತು ತರಬೇತಿಯ ಮೊದಲ ಆರು ತಿಂಗಳ ಗುಣಮಟ್ಟ ಆಧರಿಸಿ, ಇಲಾಖಾ ಪರಿವೀಕ್ಷಣೆ ನಂತರ ಪಾವತಿಸಲಾಗುವುದು.

ಹಿಂದುಳಿದ ತಾಲ್ಲೂಕುಗಳಿಗೆ ನೀಡುವ ಹೆಚ್ಚುವರಿ ಶೇಕಡಾ 10ರ ಅನುದಾನವನ್ನೂ ಸಹ ಮೇಲೆ ಹೇಳಿರುವ ವಿಧಾನದಲ್ಲಿಯೇ ಪಾವತಿಸಲಾಗುವುದು.

11. ಸರ್ಕಾರದಿಂದ Back end Investment subsidy ಯನ್ನು ಪಡೆದ ನಂತರ ಸಂಸ್ಥೆಯ ಆಡಳಿತ ವರ್ಗವು ಕೈಗಾರಿಕಾ ತರಬೇತಿ ಸಂಸ್ಥೆಯನ್ನು ಸ್ಥಾಪಿಸಿದ/ಅನುದಾನವನ್ನು ಪಡೆದಂದಿನಿಂದ 10 ವರ್ಷಗಳ ಕಾಲ ಎನ್.ಸಿ.ವಿ.ಟಿ.ಯ ಸ್ಥಾಯಿ ಮಟ್ಟದಂತೆ ಸಂಸ್ಥೆಯನ್ನು ನಡೆಸಿಕೊಂಡು ಹೋಗತಕ್ಕದ್ದು.

12. ಮೇಲೆ ವಿವರಿಸಿದಂತೆ ಡಿಜಿಇಟಿಯಿಂದ ಸಂಯೋಜನೆ ಪಡೆದ ಒಂದು ತಿಂಗಳೊಳಗೆ ರೂ. 1000/– ವನ್ನು ಉದ್ಯೋಗ ಮತ್ತು ತರಬೇತಿ ಇಲಾಖೆಯ ಆಯುಕ್ತರ ಹೆಸರಿನಲ್ಲಿ ಹುಂಡಿ ಪಾವತಿಸಿ, ನಿಗದಿತ ಅರ್ಜಿಯನ್ನು ಹಾಗೂ ಮಾಹಿತಿ ಪುಸ್ತಕವನ್ನು ಪಡೆದು ಭರ್ತಿ ಮಾಡಿ ಅಗತ್ಯ ದಾಖಲೆಗಳೊಂದಿಗೆ ಹಾಗೂ ಮುಚ್ಚಳಿಕೆಯೊಂದಿಗೆ ಉದ್ಯೋಗ ಮತ್ತು ತರಬೇತಿ ನಿರ್ದೇಶನಾಲಯ, ಕೌಶಲ್ಯ ಭವನ, ಡೈರಿ ವೃತ್ತ, ಬೆಂಗಳೂರು–29 ಇವರಿಗೆ ಸಲ್ಲಿಸತಕ್ಕದ್ದು.

ಈ ಆದೇಶವನ್ನು ಯೋಜನಾ ಇಲಾಖೆಯ ಅನಧಿಕೃತ ಟಿಪ್ಪಣಿ ಸಂಖ್ಯೆ ಪಿಡಿ 38 ಎಂ ಅಂಡ್ ಇ 2010 ದಿನಾಂಕ: 10/05/2010 ಹಾಗೂ ಆರ್ಥಿಕ ಇಲಾಖೆಯ ಅನಧಿಕೃತ ಟಿಪ್ಪಣಿ ಸಂಖ್ಯೆ: ಎಫ್‌ಡಿ 292 ವೆಚ್ಚ–9/10 ಆರ್‌ಎಫ್‌ನಂ. 39111, ದಿನಾಂಕ: 10/05/2010ರಲ್ಲಿ ನೀಡಿರುವ ಸಹಮತಿಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

ಎ.ಎಸ್. ವಿಶ್ವೇಶ್ವರಯ್ಯ
ಪೀಠಾಧಿಕಾರಿ
ಕಾರ್ಮಿಕ ಇಲಾಖೆ
(ಉದ್ಯೋಗ ಮತ್ತು ತರಬೇತಿ)

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಗಳಲ್ಲಿ ಮೆಡಿಕಲ್ ಎಲೆಕ್ಟ್ರಾನಿಕ್ಸ್ ವೃತ್ತಿ ಘಟಕವನ್ನು ಪ್ರಾರಂಭಿಸುವ ಕುರಿತು.

ಓದಲಾಗಿದೆ: ಆಯುಕ್ತರು, ಉದ್ಯೋಗ ಮತ್ತು ತರಬೇತಿ ಇಲಾಖೆ ಇವರ ಪತ್ರ ಸಂಖ್ಯೆ: ಉತನಿ/ತ/ಯೋ-2/ವಿವ-10/2006/07, ದಿನಾಂಕ: 25/05/2011.

ಪ್ರಸ್ತಾವನೆ:

ಮೇಲೆ ಓದಲಾದ ಆಯುಕ್ತರು, ಉದ್ಯೋಗ ಮತ್ತು ತರಬೇತಿ ಇಲಾಖೆ ಇವರ ಪತ್ರದಲ್ಲಿ ಮಾನ್ಯ ಮುಖ್ಯಮಂತ್ರಿಗಳು 2011-12ನೇ ಆಯವ್ಯಯ ಭಾಷಣದಲ್ಲಿ ಮೆಡಿಕಲ್ ಎಲೆಕ್ಟ್ರಾನಿಕ್ಸ್ ವೃತ್ತಿ ಘಟಕವನ್ನು ಪ್ರಾರಂಭಿಸುವ ಬಗ್ಗೆ ಪ್ರಸ್ತಾಪಿಸಿದ್ದು, ಪ್ರಾಯೋಗಿಕ ಹಂತವಾಗಿ ಸದರಿ ವೃತ್ತಿಯನ್ನು ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆ **ಹುಬ್ಬಳ್ಳಿ** ಮತ್ತು **ಬೆಂಗಳೂರು-29**ರ ಮಹಿಳಾ ಸರ್ಕಾರಿ ಕೈಗಾರಿಕಾ ತರಬೇತಿ ಕೇಂದ್ರಗಳಲ್ಲಿ ಪ್ರಾರಂಭಿಸಲು ಯೋಜಿಸಿದ್ದು, ಸದರಿ ಸಂಸ್ಥೆಗಳಲ್ಲಿ ಮೇಲ್ಕಂಡ ವೃತ್ತಿ ಘಟಕವನ್ನು ಆರಂಭಿಸುವುದರಿಂದ ಒಟ್ಟು 84 ಹೆಚ್ಚುವರಿ ಅಭ್ಯರ್ಥಿಗಳಿಗೆ ತರಬೇತಿಯ ಅವಕಾಶವನ್ನು ಕಲ್ಪಿಸಿದಂತಾಗುತ್ತದೆ ಎಂದು ಸದರಿ ಪ್ರಸ್ತಾವನೆಗೆ ತಗಲುವ ವೆಚ್ಚವನ್ನು ಲೆಕ್ಕ ಶೀರ್ಷಿಕೆ ಸಾಮಾನ್ಯ ವೆಚ್ಚಗಳು 2230-03-101-0-01-051 ಕೈಗಾರಿಕಾ ತರಬೇತಿ ಸಂಸ್ಥೆ (ಯೋಜನೆ) ಅಡಿಯಲ್ಲಿ ಭರಿಸಲು ಉದ್ದೇಶಿಸಲಾಗಿದೆ ಎಂದು ಈ ಲೆಕ್ಕ ಶೀರ್ಷಿಕೆಯಲ್ಲಿ 2011-12ನೇ ಸಾಲಿಗೆ ಒದಗಿಸಿರುವ ಅನುದಾನವು ಪ್ರಸ್ತುತ ಅನುಷ್ಠಾನದಲ್ಲಿರುವ ಕಾರ್ಯಕ್ರಮಗಳಿಗೆ ಸಾಲದೇ ಬರುವುದರಿಂದ, ಸದರಿ ಪ್ರಸ್ತಾವನೆ ಕುರಿತಂತೆ ₹252.60 ಲಕ್ಷಗಳು ಹೆಚ್ಚುವರಿ ಅನುದಾನವನ್ನು ಬಿಡುಗಡೆ ಮಾಡುವಂತೆ ಕೋರುತ್ತಾ, ಸದರಿ ಸಂಸ್ಥೆಗಳಲ್ಲಿ 2 ಘಟಕಗಳ ಅನುಷ್ಠಾನಕ್ಕೆ 12 ಸಿಬ್ಬಂದಿಯವರ ಹುದ್ದೆಗಳನ್ನು ಸೃಜಿಸಲು ಕೋರುತ್ತಾ, ಹಾಲಿ ಇರುವ ನಿರ್ಬಂಧವನ್ನು ಸಡಿಲಿಸಿ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲು ಅನುಮತಿ ನೀಡುವಂತೆಯೂ ಸಹ ಕೋರಿರುತ್ತಾರೆ.

ಪ್ರಸ್ತಾವನೆಯನ್ನು ಪರಿಶೀಲಿಸಿದ ನಂತರ ಕೆಳಗಿನಂತೆ ಆದೇಶಿಸಲಾಗಿದೆ.

ಸರ್ಕಾರಿ ಆದೇಶ ಸಂಖ್ಯೆ ಕಾಇ 107 ಇಟಿಐ 2011 ಬೆಂಗಳೂರು, ದಿನಾಂಕ: 13/01/2012

ಪ್ರಸ್ತಾವನೆಯಲ್ಲಿ ವಿವರಿಸಿರುವ ಹಿನ್ನೆಲೆಯಲ್ಲಿ 2011-12ನೇ ಸಾಲಿನಲ್ಲಿ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆ, ಹುಬ್ಬಳ್ಳಿ ಮತ್ತು ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆ (ಮ), ಹೊಸೂರು ರಸ್ತೆ, ಬೆಂಗಳೂರು-29 ಇಲ್ಲಿ ಮೆಡಿಕಲ್ ಎಲೆಕ್ಟ್ರಾನಿಕ್ಸ್ ವೃತ್ತಿ ಘಟಕವನ್ನು ಪ್ರಾರಂಭಿಸುವುದಕ್ಕೆ ಹಾಗೂ ಅದಕ್ಕೆ ಅಗತ್ಯವಿರುವ 4 ಕಿರಿಯ ತರಬೇತಿ ಅಧಿಕಾರಿ ಮತ್ತು 2 ಕಾರ್ಯಾಗಾರ ಸಹಾಯಕರು ಸೇರಿ ಒಟ್ಟು 6 ಹುದ್ದೆಗಳನ್ನು ಸೃಜಿಸುವುದಕ್ಕೆ ಹಾಗೂ ಆವರ್ತಕ ಮತ್ತು ಅನಾವರ್ತಕ ವೆಚ್ಚಗಳಿಗೆ ಒಟ್ಟು ರೂ.221.236 ಲಕ್ಷ (ಎರಡು ಕೋಟಿ ಇಪ್ಪತ್ತೊಂದು ಲಕ್ಷದ ಇಪ್ಪತ್ತ್ಮೂರು ಸಾವಿರದ ಆರು ನೂರು ರೂಪಾಯಿಗಳು ಮಾತ್ರ) ಗಳ ಹೆಚ್ಚುವರಿ ಅನುದಾನವನ್ನು ಒದಗಿಸುವುದಕ್ಕೆ ಸರ್ಕಾರದ ಮಂಜೂರಾತಿ ನೀಡಲಾಗಿದೆ.

ಈ ಆದೇಶವನ್ನು ಯೋಜನಾ ಇಲಾಖೆಯ ಅನಧಿಕೃತ ಟಿಪ್ಪಣಿ ಸಂಖ್ಯೆ: ಪಿಡಿ 39 ಎಂ&ಇ 2011 ದಿನಾಂಕ: 18/06/2011ರ ಹಾಗೂ ಆರ್ಥಿಕ ಇಲಾಖೆಯ ಅನಧಿಕೃತ ಟಿಪ್ಪಣಿ ಸಂಖ್ಯೆ: ಆಇ 670 ವೆಚ್ಚ 9/11 ದಿನಾಂಕ: 05/01/2012ರ ಸಹಮತಿಯ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

ಜೆ.ಎಸ್.ವಿಶ್ವನಾಥಪ್ಪ
ಪೀಠಾಧಿಕಾರಿ
ಕಾರ್ಮಿಕ ಇಲಾಖೆ
(ಉದ್ಯೋಗ ಮತ್ತು ತರಬೇತಿ)

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಗಳಲ್ಲಿ ಹೊಸ ವೃತ್ತಿ ಘಟಕಗಳಾದ ಆಟೋಮೆಕಾನಿಕ್ ವೃತ್ತಿ ಘಟಕಗಳನ್ನು ಪ್ರಾರಂಭಿಸುವ ಕುರಿತು.

ಓದಲಾಗಿದೆ: ಆಯುಕ್ತರು, ಉದ್ಯೋಗ ಮತ್ತು ತರಬೇತಿ ಇಲಾಖೆ ಇವರ ಪತ್ರ ಸಂಖ್ಯೆ ಉತನಿ/ತ/ಯೋ-2ವಿವ-3/ 2011-12, ದಿನಾಂಕ: 09/05/2011.

ಪ್ರಸ್ತಾವನೆ :

ಮಾನ್ಯ ಮುಖ್ಯಮಂತ್ರಿಯವರು 2011-12ನೇ ಸಾಲಿನ ಆಯವ್ಯಯ ಭಾಷಣದಲ್ಲಿ "ಆಟೋಮೆಕಾನಿಕ್ ವೃತ್ತಿ ಘಟಕಗಳನ್ನು ಕೈಗಾರಿಕಾ ತರಬೇತಿ ಸಂಸ್ಥೆಗಳಲ್ಲಿ ಪ್ರಾಯೋಗಿಕ ಹಂತವಾಗಿ ಪರಿಚಯಿಸಲಾಗುವುದು ಎಂದು ಹೇಳಿರುತ್ತಾರೆ. ಇದನ್ನು ಅನುಷ್ಠಾನಗೊಳಿಸುವ ನಿಟ್ಟಿನಲ್ಲಿ ಮೇಲೆ ಓದಲಾದ ಆಯುಕ್ತರು, ಉದ್ಯೋಗ ಮತ್ತು ತರಬೇತಿ ಇಲಾಖೆ ಇವರ ಪತ್ರದಲ್ಲಿ ಆಟೋ ಮೆಕಾನಿಕ್ ವೃತ್ತಿ ಘಟಕಗಳನ್ನು ಪ್ರಾಯೋಗಿಕ ಹಂತವಾಗಿ ರಾಜ್ಯ ವೃತ್ತಿ ಶಿಕ್ಷಣ ಪರಿಷತ್ತಿನಡಿಯಲ್ಲಿ, ಆಟೋಮೊಬೈಲ್ ವಿಷಯದ ಬಗ್ಗೆ ರಾಷ್ಟ್ರೀಯ ವೃತ್ತಿಶಿಕ್ಷಣ ಪರಿಷತ್ತು ನಡೆಸದೇ ಇರುವ ಕೆಳಕಂಡ ವೃತ್ತಿಗಳನ್ನು ಗುರುತಿಸಿ ಅವುಗಳನ್ನು ಕೆಳಕಂಡ ಸ್ಥಳಗಳಲ್ಲಿ ಪ್ರಾರಂಭಿಸಲು ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ಕ್ರ ಸಂ.	ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆ	ರಾಜ್ಯ ವೃತ್ತಿ ಶಿಕ್ಷಣ ಪರಿಷತ್ತಿನ ಕೋರ್ಸ್ ಹೆಸರು	ಕೋರ್ಸಿನ ಅವಧಿ	ವಿದ್ಯಾರ್ಥಿಗಳ ಸಂಖ್ಯೆ
1	ದಾವಣಗೆರೆ	Automobile Painter	6 ತಿಂಗಳು	84
		Motor Vehicle Service-General		84
2	ಪೀಣ್ಯ	Automobile Painter	6 ತಿಂಗಳು	84
3	ಬಳ್ಳಾರಿ	Automobile Painter	6 ತಿಂಗಳು	84
4	ಮಂಗಳೂರು	Auto Electrician & AC Mechanic	6 ತಿಂಗಳು	42

5	ಕೆ.ಜಿ.ಎಫ್	Auto Electrician & AC Mechanic	1 ವರ್ಷ	42
6	ಮೈಸೂರು	Auto Electrician & AC Mechanic	1 ವರ್ಷ	84
7	ಹೊಸೂರು ರಸ್ತೆ, ಬೆಂಗಳೂರು	Motor Vehicle Service-General	6 ತಿಂಗಳು	84
			Total	**588**

ಅಲ್ಲದೆ ಆಟೋ ಮೆಕಾನಿಕ್ ವೃತ್ತಿಗೆ ಸಂಬಂಧಿಸಿದಂತೆ ರಾಷ್ಟ್ರೀಯ ವೃತ್ತಿಶಿಕ್ಷಣ ಪರಿಷತ್ತು ನಡೆಸುವ ವೃತ್ತಿಗಳನ್ನು ಗುರುತಿಸಿ ಅವುಗಳನ್ನು ಕೆಳಕಂಡ ಸ್ಥಳಗಳಲ್ಲಿ ಪ್ರಾರಂಭಿಸಲು ಯೋಜಿಸಲಾಗಿದೆ ಎಂದು ತಿಳಿಸುತ್ತಾ, ವಿವರಗಳನ್ನು ಈ ಕೆಳಕಂಡಂತೆ ನೀಡಿರುವರು.

ಕ್ರ ಸಂ.	ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆ	ರಾಷ್ಟ್ರೀಯ ವೃತ್ತಿ ಶಿಕ್ಷಣ ಪರಿಷತ್ತಿನ ಕೋರ್ಸ್ ಹೆಸರು	ಕೋರ್ಸಿನ ಅವಧಿ	ವಿದ್ಯಾರ್ಥಿಗಳ ಸಂಖ್ಯೆ
1	ಗಂಗಾವತಿ	Motor Mechanic Vehicle	2 ವರ್ಷ	42
2	ಭದ್ರಾವತಿ	Mechanical Auto Electrical & Electronics	6 ತಿಂಗಳು	84
3	ಹುಬ್ಬಳ್ಳಿ	Mechanical Auto Electrical & Electronics	6 ತಿಂಗಳು	84
4	ಹೊಸೂರು ರಸ್ತೆ, ಬೆಂಗಳೂರು	Mechanical Auto Electrical & Electronics	1 ವರ್ಷ	84
5	ಬಿಜಾಪುರ	Mechanic repair & maintenance of Light Vehicles	1 ವರ್ಷ	42
			Total	**336**

ಮುಂದುವರೆದು, ಸದರಿ ವೃತ್ತಿಗಳಿಗೆ ಸ್ಥಳೀಯವಾಗಿ ಹೆಚ್ಚಿನ ಬೇಡಿಕೆಯಿದ್ದು, ಅವುಗಳನ್ನು ಪ್ರಾರಂಭಿಸಲು ಅನುಮೋದನೆ ನೀಡಿದಲ್ಲಿ ಶಿಕ್ಷಣಾರ್ಥಿಗಳಿಗೆ ಹೆಚ್ಚಿನ ಉದ್ಯೋಗಾವಕಾಶ ದೊರೆಯಲು ಅನುಕೂಲವಾಗುತ್ತದೆ ಎಂದು, ಸದರಿ ಸಂಸ್ಥೆಗಳಲ್ಲಿ ಮೇಲ್ಕಂಡ ವೃತ್ತಿ ಘಟಕಗಳನ್ನು ಆರಂಭಿಸುವುದರಿಂದ ಒಟ್ಟು 924 ಹೆಚ್ಚುವರಿ ಅಭ್ಯರ್ಥಿಗಳಿಗೆ ತರಬೇತಿಯ ಅವಕಾಶವನ್ನು ಕಲ್ಪಿಸಿದಂತಾಗುತ್ತದೆ ಎಂದು, ಈ ಮೇಲ್ಕಂಡ ವೃತ್ತಿಗಳಲ್ಲಿ ತರಬೇತಿಯನ್ನು ಆರಂಭಿಸಲು ಅನಾವರ್ತಕ ವೆಚ್ಚ (ಯಂತ್ರೋಪಕರಣಗಳು ಹಾಗೂ ಪೀಠೋಪಕರಣ ಖರೀದಿಗೆ) Rs.350.00 ಲಕ್ಷಗಳು ಹಾಗೂ ಆವರ್ತಕ ವೆಚ್ಚ (ಸಿಬ್ಬಂದಿ ವೇತನ ಮತ್ತು ಭತ್ಯೆ, ತರಬೇತಿ ವೆಚ್ಚ ಇತ್ಯಾದಿಗಳಿಗೆ) ವರ್ಷಕ್ಕೆ ರೂ.125.82 ಲಕ್ಷಗಳು ಬೇಕಾಗುತ್ತದೆ ಎಂದು ತಿಳಿಸಿರುವರು. ಸದರಿ ವೃತ್ತಿಯನ್ನು ಪ್ರಾರಂಭಿಸಲು ಗುರುತಿಸಿರುವ ಸ್ಥಳಗಳು ಆಟೋ ಮೆಕಾನಿಕ್ ವೃತ್ತಿಯನ್ನು ಪ್ರಾರಂಭಿಸಲು ಸೂಕ್ತ ಸ್ಥಳಾವಕಾಶ ಮತ್ತು ಅದಕ್ಕೆ ಬೇಕಾದ ಮೂಲಭೂತ ಸೌಕರ್ಯಗಳನ್ನು ಹೊಂದಿರುತ್ತವೆ ಎಂದು ತಿಳಿಸಿರುವರು.

ಮುಂದುವರೆದು, ಸದರಿ ಪ್ರಸ್ತಾವನೆಗೆ ತಗಲುವ ವೆಚ್ಚವನ್ನು ಇಲಾಖೆಯ ಲೆಕ್ಕ ಶೀರ್ಷಿಕೆ ಸಾಮಾನ್ಯ ವೆಚ್ಚಗಳು 2230–03–101–0–01–051 ಕೈಗಾರಿಕಾ ತರಬೇತಿ ಸಂಸ್ಥೆ (ಯೋಜನೆ) ಅಡಿಯಲ್ಲಿ ಭರಿಸಲು ಉದ್ದೇಶಿಸಲಾಗಿದೆ ಎಂದು, ಈ ಲೆಕ್ಕ ಶೀರ್ಷಿಕೆಯಲ್ಲಿ 2011–12ನೇ ಸಾಲಿಗೆ ಒದಗಿಸಿರುವ ಅನುದಾನವು ಪ್ರಸ್ತುತ ಅನುಷ್ಠಾನದಲ್ಲಿರುವ ಕಾರ್ಯಕ್ರಮಗಳಿಗೆ ಸಾಲದೇ ಬರುವುದರಿಂದ, ಸದರಿ ಪ್ರಸ್ತಾವನೆ ಕುರಿತಂತೆ Rs.475.82 ಲಕ್ಷಗಳ ಹೆಚ್ಚುವರಿ ಅನುದಾನವನ್ನು ಬಿಡುಗಡೆ ಮಾಡುವಂತೆ ಕೋರಿರುವರು.

ಸದರಿ ಸಂಸ್ಥೆಗಳಲ್ಲಿ 13 ಘಟಕಗಳನ್ನು ಅನುಷ್ಠಾನಕ್ಕೆ 26 ಸಿಬ್ಬಂದಿಯವರ ಹುದ್ದೆಗಳನ್ನು ಸೃಜಿಸಲು ಕೋರಿರುವರು, ಅಲ್ಲದೇ ಈ 26 ಸಿಬ್ಬಂದಿಗಳ ಹುದ್ದೆಗಳನ್ನು ಸೃಜಿಸಿ ಮಂಜೂರಾತಿ ನೀಡುವುದಲ್ಲದೇ ಹಾಲಿ ಇರುವ ನಿರ್ಬಂಧವನ್ನು ಸಡಿಲಿಸಿ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲು ಅನುಮತಿ ಕೋರುತ್ತಾ, ರೂ.475.82 ಲಕ್ಷಗಳ ಹೆಚ್ಚುವರಿ ಅನುದಾನವನ್ನು ಒದಗಿಸಿ ಆದೇಶ ಹೊರಡಿಸುವಂತೆ ಕೋರಿರುವರು.

ಪ್ರಸ್ತಾವನೆಯನ್ನು ಪರಿಶೀಲಿಸಿದ ನಂತರ ಕೆಳಗಿನಂತೆ ಆದೇಶಿಸಲಾಗಿದೆ.

ಸರ್ಕಾರಿ ಆದೇಶ ಸಂಖ್ಯೆ ಕಾಇ 98 ಇಟಿಐ 2011 ಬೆಂಗಳೂರು, ದಿನಾಂಕ: 16/12/2011

ಪ್ರಸ್ತಾವನೆಯಲ್ಲಿ ವಿವರಿಸಿರುವ ಹಿನ್ನೆಲೆಯಲ್ಲಿ ರಾಷ್ಟ್ರೀಯ ವೃತ್ತಿ ಶಿಕ್ಷಣ ಪರಿಷತ್‌ನ ನಮೂನೆಯನ್ವಯ 5 ಕೈಗಾರಿಕಾ ತರಬೇತಿ ಸಂಸ್ಥೆಗಳಲ್ಲಿ ಆಟೋ ಮೆಕಾನಿಕ್ ವೃತ್ತಿಯನ್ನು ಪ್ರಾರಂಭಿಸಲು ಮತ್ತು ಅದಕ್ಕೆ ಅಗತ್ಯವಿರುವ 5 ಬೋಧಕ ಹುದ್ದೆಗಳನ್ನು ಸೃಜಿಸುವುದಕ್ಕೆ [ಹಾಗೂ ರೂ. 1.50 ಕೋಟಿ (ಒಂದು ಕೋಟಿ ಐವತ್ತು ಲಕ್ಷ ರೂಪಾಯಿಗಳು ಮಾತ್ರ) ಅನಾವರ್ತಕ ವೆಚ್ಚಕ್ಕೆ ಮತ್ತು ಅಗತ್ಯವಿರುವ ಆವರ್ತಕ ವೆಚ್ಚವನ್ನು ಉದ್ಯೋಗ ಮತ್ತು ತರಬೇತಿ ಇಲಾಖೆಯ ಆಯವ್ಯಯ ಉಳಿತಾಯದಿಂದ ಭರಿಸುವುದಕ್ಕೆ] ಸರ್ಕಾರದ ಮಂಜೂರಾತಿ ನೀಡಲಾಗಿದೆ.

ಈ ಆದೇಶವನ್ನು ಆರ್ಥಿಕ ಇಲಾಖೆಯ ಅನಧಿಕೃತ ಟಿಪ್ಪಣಿ ಸಂಖ್ಯೆ: ಆಇ 579 ವೆಚ್ಚ-9/11 ದಿನಾಂಕ: 17/11/2011ರ ಸಹಮತಿಯ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

ಜೆ.ಎಸ್.ವಿಶ್ವನಾಥಪ್ಪ
ಪೀಠಾಧಿಕಾರಿ
ಕಾರ್ಮಿಕ ಇಲಾಖೆ
(ಉದ್ಯೋಗ ಮತ್ತು ತರಬೇತಿ)

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಬೆಂಗಳೂರು ಹಾಗೂ ಗುಲ್ಬರ್ಗಾ ಜಿಲ್ಲೆಗಳಲ್ಲಿ ಕರ್ನಾಟಕ ಬಹು ಕೌಶಲ್ಯ ಅಭಿವೃದ್ಧಿ ಕೇಂದ್ರಗಳನ್ನು ಸ್ಥಾಪಿಸುವ ಬಗ್ಗೆ.

ಓದಲಾಗಿದೆ: ಆಯುಕ್ತರು, ಉದ್ಯೋಗ ಮತ್ತು ತರಬೇತಿ ಇಲಾಖೆ ರವರ ಪತ್ರ ಸಂ.ಡಿಇಟಿ/ಟಿಆರ್‌ಜಿ/ಪಿಎಲ್‌ಎನ್-1/ ಸಿಆರ್-85/2009-10, ದಿನಾಂಕ: 18/06/2010.

ಪ್ರಸ್ತಾವನೆ:

ಕರ್ನಾಟಕ ರಾಜ್ಯವು ಇತ್ತೀಚಿನ ವರ್ಷಗಳಲ್ಲಿ ಆರ್ಥಿಕ ಹಾಗೂ ಕೈಗಾರಿಕೋದ್ಯಮಗಳ ಕ್ಷೇತ್ರದಲ್ಲಿ ಗಮನಾರ್ಹ ಬೆಳವಣಿಗೆಯನ್ನು ಹೊಂದಿದ್ದು, ನುರಿತ ಕೌಶಲ್ಯಯುಕ್ತ ಮಾನವ ಸಂಪನ್ಮೂಲದ ಬೇಡಿಕೆಯು ಗಣನೀಯವಾಗಿ ಸಾಂಪ್ರದಾಯಿಕ ವಲಯಗಳಲ್ಲಿ ಹಾಗೂ ಮುಖ್ಯವಾಗಿ ಹೊಸದಾಗಿ ಹೊರಹೊಮ್ಮುತ್ತಿರುವ ತಾಂತ್ರಿಕ ವಲಯದಲ್ಲಿ ಹೆಚ್ಚಾಗಿರುತ್ತದೆ. ಅಲ್ಲದೇ, ಜಾಗತಿಕ ಹೂಡಿಕೆದಾರರ ಸಮಾವೇಶದಿಂದಾಗಿ ನಾಲ್ಕು ಲಕ್ಷ ಕೋಟಿ ರೂಪಾಯಿಗಳ ಹೂಡಿಕೆಗೆ ಒಪ್ಪಲಾಗಿದ್ದು, ಇದರಿಂದಾಗಿ ಅಂತರರಾಷ್ಟ್ರೀಯ ಗುಣಮಟ್ಟದ ಕೌಶಲ್ಯ ಹೊಂದಿರುವ ಮಾನವ ಸಂಪನ್ಮೂಲದ ಬೇಡಿಕೆಯು ಹೆಚ್ಚಾಗಿರುತ್ತದೆ. ಆದ್ದರಿಂದ ರಾಜ್ಯದ ಯುವ ಜನರು ಉತ್ಪಾದನಾ ಹಾಗೂ ಸೇವಾಕ್ಷೇತ್ರದಲ್ಲಿ ಲಭ್ಯವಿರುವ ಉದ್ಯೋಗಾವಕಾಶಗಳನ್ನು ಪಡೆದುಕೊಳ್ಳಲು, ಉದ್ಯೋಗಾರ್ಹರನ್ನಾಗಿಸುವ ಅಗತ್ಯವಿದ್ದು, ಆಯಾ ಕ್ಷೇತ್ರದ ಬೇಡಿಕೆಗನು ಗುಣವಾಗಿ ಕೌಶಲ್ಯತೆಯನ್ನು ಸಿದ್ಧಪಡಿಸುವುದು ಅಗತ್ಯವಿದೆ.

ಸುಧಾರಿತ ಕೌಶಲ್ಯತೆ ಹಾಗೂ ತರಬೇತಿ ನೀಡುವ ಮುಖಾಂತರ ಯುವ ಜನರು ಸ್ಥಳೀಯ, ರಾಷ್ಟ್ರ ಮಟ್ಟದ ಅಥವಾ ಜಾಗತಿಕ ಉದ್ಯೋಗ ಮಾರುಕಟ್ಟೆಯಲ್ಲಿ ಉದ್ಯೋಗ ಪಡೆದುಕೊಳ್ಳಲು ಸಾಮರ್ಥ್ಯರನ್ನಾಗಿಸುವ ದೃಷ್ಟಿಕೋನವನ್ನು ರಾಜ್ಯ ಸರ್ಕಾರ ಹೊಂದಿರುತ್ತದೆ. ಈ ನಿಟ್ಟಿನಲ್ಲಿ ಕರ್ನಾಟಕ ಸರ್ಕಾರವು ಬೆಂಗಳೂರು ಮತ್ತು ಗುಲ್ಬರ್ಗಾ ಜಿಲ್ಲೆಗಳಲ್ಲಿ "ಕರ್ನಾಟಕ ಬಹು ಕೌಶಲ್ಯ ಅಭಿವೃದ್ಧಿ ಕೇಂದ್ರ"ಗಳನ್ನು ಪ್ರಾರಂಭಿಸಿ ಅಂತರ ರಾಷ್ಟ್ರ ಗುಣಮಟ್ಟದಲ್ಲಿ ಅತ್ಯುನ್ನತ ತರಬೇತಿಯನ್ನು ಆಧುನಿಕ ತಂತ್ರಜ್ಞಾನ ಹೊಂದಿರುವ ಜರ್ಮಲ್ ತಂತ್ರಜ್ಞಾನದ ನಿಗಮದ ಜಿ.ಟಿ.ಝಡ್-ಐ.ಸ್

ಸಹಯೋಗದೊಂದಿಗೆ ಅನುಷ್ಠಾನಗೊಳಿಸಲು ಉದ್ದೇಶಿಸಿದೆ. ಇದಕ್ಕೆ ಸಂಬಂಧಿಸಿದಂತೆ ಉಲ್ಲೇಖ (1)ರಲ್ಲಿನ ಪತ್ರದ ಮೂಲಕ ಆಯುಕ್ತರು, ಉದ್ಯೋಗ ಮತ್ತು ತರಬೇತಿ ಇಲಾಖೆ ಇವರು ಸಲ್ಲಿಸಿರುವ ಪ್ರಸ್ತಾವನೆಯನ್ನು ಪರಿಶೀಲಿಸಿ ಈ ಕೆಳಗಿನಂತೆ ಆದೇಶಿಸಿದೆ.

ಸರ್ಕಾರಿ ಆದೇಶ ಸಂಖ್ಯೆ ಕಾಇ 193 ಇಟಿಐ 2010 ಬೆಂಗಳೂರು,

ದಿನಾಂಕ: 26/10/2010

ಬೆಂಗಳೂರು ಮತ್ತು ಗುಲ್ಬರ್ಗಾದಲ್ಲಿ ಕರ್ನಾಟಕ ಬಹು ಕೌಶಲ್ಯ ಅಭಿವೃದ್ಧಿ ಕೇಂದ್ರಗಳನ್ನು ಸ್ಥಾಪಿಸಲು ಮತ್ತು ಇವುಗಳನ್ನು ಸೊಸೈಟಿ ನಿಯಮಗಳಡಿಯಲ್ಲಿ ನೋಂದಾಯಿಸಲು ಮಂಜೂರಾತಿ ನೀಡಲಾಗಿದೆ.

ಈ ಕೇಂದ್ರಗಳಿಗೆ ಸರ್ಕಾರದ ಮುಖ್ಯ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ಅನುಬಂಧದಲ್ಲಿ ಲಗತ್ತಿಸಿದಂತೆ ಆಡಳಿತ ಪರಿಷತ್ತನ್ನು ರಚಿಸಲಾಗಿದೆ.

2011-12ನೇ ಸಾಲಿನಿಂದ ಶೇ. 50ರಷ್ಟು ಯೋಜನಾ ವೆಚ್ಚವನ್ನು ರಾಜ್ಯ ಸರ್ಕಾರದ ಪಾಲಾಗಿ ನೀಡಲು ಹಾಗೂ 2011-12ರಲ್ಲಿ ಕೋರ್ಸುಗಳನ್ನು ಪ್ರಾರಂಭಿಸಲು ಪೂರ್ವಸಿದ್ಧತಾ ಕೆಲಸಗಳಾದ ತರಬೇತಿ ಮಾಡ್ಯೂಲುಗಳ ಅಭಿವೃದ್ಧಿ, ಸಿಬ್ಬಂದಿ ತರಬೇತಿ ಮೊದಲಾದ ಕೆಲಸಗಳಿಗೆ ರೂ.50 ಲಕ್ಷ ಪಾವತಿಸಲು ಕರ್ನಾಟಕ ವೃತ್ತಿ ತರಬೇತಿ ಮತ್ತು ಕೌಶಲ್ಯ ಅಭಿವೃದ್ಧಿ ನಿಗಮ ಇವರಿಗೆ ಪ್ರಾಧಿಕಾರ ನೀಡಲು ಮಂಜೂರಾತಿ ನೀಡಲಾಗಿದೆ.

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ನಿಗಮದ ಉದ್ದೇಶಿತ ಕೈಗಾರಿಕಾ ವಸಾಹತು ಗುಲ್ಬರ್ಗಾದಲ್ಲಿ 20 ಎಕರೆ ಭೂಮಿಯನ್ನು ಪಡೆಯಲು ಮುಂದಿನ ಕ್ರಮ ವಹಿಸಲು ಅನುಮತಿ ನೀಡಲಾಗಿದೆ.

ಈ ಆದೇಶವನ್ನು ಯೋಜನಾ ಇಲಾಖೆಯ ಅನಧಿಕೃತ ಟಿಪ್ಪಣಿ ಸಂಖ್ಯೆ ಪಿಡಿ 95 ಎಂ ಅಂಡ್ ಇ 2010 ದಿನಾಂಕ: 25/09/2010 ಹಾಗೂ ಆರ್ಥಿಕ ಇಲಾಖೆಯ ಅನಧಿಕೃತ ಟಿಪ್ಪಣಿ ಸಂಖ್ಯೆ: ಆಇ 668 ವೆಚ್ಚ-9/10 ಆರ್ಎಫ್ ನಂ. 45076, ದಿನಾಂಕ: 29/09/2010ರಲ್ಲಿ ನೀಡಿರುವ ಸಹಮತಿ ಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

ಎ.ಎಸ್. ವಿಶ್ವೇಶ್ವರಯ್ಯ
ಪೀಠಾಧಿಕಾರಿ
ಕಾರ್ಮಿಕ ಇಲಾಖೆ
(ಉದ್ಯೋಗ ಮತ್ತು ತರಬೇತಿ).

ಏತ ನೀರಾವರಿ ಯೋಜನೆ

12 (22) ಶ್ರೀ ಗೂಳಿಹಟ್ಟಿ ಡಿ.ಶೇಖರ್ (ಹೊಸದುರ್ಗ) : ಮಾನ್ಯ ಜಲಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹೇಮಾವತಿ ಹಿನ್ನೀರಿನ ಪ್ರದೇಶದಿಂದ ಹೊಸದುರ್ಗ ತಾಲ್ಲೂಕಿಗೆ ಕುಡಿಯುವ ನೀರಿನ ಸೌಲಭ್ಯ ಒದಗಿಸುವ ಹೊನ್ನವಳ್ಳಿ ಏತ ನೀರಾವರಿ ಯೋಜನೆಯ ಒಟ್ಟು ಅಂದಾಜು ಎಷ್ಟು? ಎಷ್ಟು ಖರ್ಚಾಗಿದೆ? ಕಾಮಗಾರಿ ಯಾವ ಹಂತದಲ್ಲಿದೆ, ಯಾವಾಗ ಮುಗಿಯುತ್ತದೆ (ಪೂರ್ಣ ವಿವರ ಒದಗಿಸುವುದು);

ಆ) ಅಪ್ಪರ್ ಭದ್ರಾ ಯೋಜನೆಯ ಕಾಮಗಾರಿ ಯಾವ ಹಂತದಲ್ಲಿದೆ? ಈ ಯೋಜನೆ ಯಾವಾಗ ಪೂರ್ಣವಾಗುತ್ತದೆ? ಹೊಸದುರ್ಗ ತಾಲ್ಲೂಕಿನ ಎಷ್ಟು ಎಕರೆ ಪ್ರದೇಶಕ್ಕೆ ಇದರಿಂದ ಪ್ರಯೋಜನವಾಗುತ್ತದೆ? ಎಷ್ಟು ಕೆರೆಗಳು ಭರ್ತಿಯಾಗುತ್ತದೆ? ಮುಂದೆ ಎಷ್ಟು ವರ್ಷಗಳ ಅವಧಿಯಲ್ಲಿ ಹೊಸದುರ್ಗ ತಾಲ್ಲೂಕಿಗೆ ನೀರು ಬರಬಹುದು?